ಮ. ಈ. ಗುರು

ಎಲ್. ಶಿವಲಿಂಗಪ್ಪ



ಕರ್ನಾಟಕ ಲಲಿತಕಲಾ ಅಕಾಡೆಮಿ

ಬೆಂಗಳೂರು

ಸುವರ್ಣ ಕರ್ನಾಟಕ 2007

ಕ್ಷಿಪ್ರ ರೇಖಾ ಚಿತ್ರ ನಿಪುಣ

ಮ. ಈ. ಗುರು

ಎಲ್. ಶಿವಲಿಂಗಪ್ಪ

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ೫೬೦೦೦೨

M. E. GURU
A Biography by **L. Shivalingappa,** artist and writer. Mobile: 9986881128
Published by **V. N. Mallikarjuna Swamy,** *Registrar*
KARNATAKA LALITHAKALA ACADEMY, Kannada Bhavana
J.C. Road, Bengalooru 560002. Phone: +91-80-22480297

Translated: N.B. Kaverappa

First Edition : 2007
Pages : 80
Copies : 1000
Price : 100/-

Book Designed and Conceived by
B.L. Narasimhamurthy
Mobile: 9972891207 Email: vibhinnamc@gmail.com

D.T.P. and Printing
YASHASVI PRINT-ADS
Phone: +91-80-23583831 / 9448373577
Email: yashasviads@yahoo.co.in

ಪ್ರಕಾಶಕರು:
ವಿ.ಎನ್. ಮಲ್ಲಿಕಾರ್ಜುನಸ್ವಾಮಿ, *ಆಡಳಿತಾಧಿಕಾರಿಗಳು*
ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು ೫೬೦೦೦೨ ದೂರವಾಣಿ: +೯೧-೮೦-೨೨೪೮೦೨೯೭

ಅನುವಾದ: **ಎನ್.ಬಿ. ಕಾವೇರಪ್ಪ**

ಮೊದಲ ಮುದ್ರಣ : ೨೦೦೭
ಪುಟಗಳು : ೮೦
ಪ್ರತಿಗಳು : ೧೦೦೦
ಬೆಲೆ : ೧೦೦/-

ಮುಖಪುಟ ಮತ್ತು ಪುಸ್ತಕವಿನ್ಯಾಸ
ಬಿ.ಎಲ್. ನರಸಿಂಹಮೂರ್ತಿ
Mobile: 9972891207 Email: vibhinnamc@gmail.com

ಮುದ್ರಕರು
ಯಶಸ್ವಿ ಪ್ರಿಂಟ್-ಆಡ್ಸ್
86, 2ನೇ ಅಡ್ಡ ರಸ್ತೆ, ಕಾವೇರಿಪುರ, ಕಾಮಾಕ್ಷಿಪಾಳ್ಯ, ಬೆಂಗಳೂರು 560079
✆ +91-80-23583831 / 9448373577 Email : yashasviads@yhaoo.co.in

ಅಧ್ಯಕ್ಷರ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಳೆದ ನಲವತ್ತಮೂರು ವರುಷಗಳಿಂದ ಲಲಿತಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರಕಲಾ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ **"ಕಲಾವಿದರ ಮಾಲೆ"** ಪುಸ್ರಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತಾ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲೀಷ್ ಭಾಷೆಗೂ ಅನುವಾದಿಸಿ ಪ್ರಕಟಿಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನು ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕಟಿತ **"ಮ. ಈ. ಗುರು"** ಅವರ ಪುಸ್ತಕವು ಜೀವನ ಮತ್ತು ಸಾಧನೆಗಳನ್ನು ಪರಿಚಯಿಸುತ್ತದೆ. ಈ ಪುಸ್ತಕದ ಲೇಖಕರಾದ ಶಿವಲಿಂಗಪ್ಪನವರು ಸ್ವತಃ ಕಲಾವಿದರಾಗಿದ್ದು ಪ್ರಸ್ತುತ ಕಲಾವಿದರ ಜೀವನ, ಸಾಧನೆಗಳನ್ನು ಅರಿತವರಾಗಿದ್ದರಿಂದ ಸಮಗ್ರ ಪರಿಚಯವನ್ನು ಮತ್ತು ಚಿತ್ರಗಳನ್ನು ಒದಗಿಸಿ ಪುಸ್ತಕ ರೂಪದಲ್ಲಿ ಅಕಾಡೆಮಿಗೆ ನೀಡಿ, ಉತ್ತಮ ಸ್ವರೂಪ ನೀಡಿದ್ದಾರೆ,

ಈ ಮೊದಲು ಕಿರು ಅಳತೆಯಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸ್ತಕಗಳನ್ನು ಈಗ ದೊಡ್ಡ ಅಳತೆಯಲ್ಲಿ ಸಿದ್ದಪಡಿಸಿ ಓದುಗರ ಕೈಗಿತ್ತಿದ್ದೇವೆ. ಎಂದಿನಂತೆ ಕಲಾಸಕ್ತರು, ಕಲಾಇತಿಹಾಸ ಪ್ರೇಮಿಗಳೂ ಈ ಪುಸ್ತಕಗಳನ್ನು ಸ್ವಾಗತಿಸುತ್ತಾರೆಂದು ಆಶೀಸಲಾಗಿದೆ.

ಈ ಪುಸ್ತಕವನ್ನು ಮುದ್ರಿಸಿದ ಯಶಸ್ವಿ ಪ್ರಿಂಟ್ ಆರ್ಡ್ಸ್‌ನ ಮಾಲೀಕರಾದ ಶ್ರೀಮತಿ ವೀಣಾ ಎನ್. ಮೂರ್ತಿ ಅವರಿಗೂ ಪ್ರಕಟಿಸಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೂ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ವಿ.ಟಿ. ಕಾಳೆ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ

ಲೇಖಕರ ಪರಿಚಯ

ಚಿತ್ರ-ಶಿಲ್ಪ-ಜನಪದ ಮತ್ತಾವುದೇ ಲಲಿತಕಲೆಗಳಲ್ಲಿ ಕಲಾವಿದರಾದವರಲ್ಲಿ ಬಹುಪಾಲು ಕಲಾವಿದರು ಲೇಖಕರಾಗಿರುವುದಿಲ್ಲ. ಕಾರಣ ಕಲೆಯಷ್ಟೇ ಶ್ರಮಿಸಿ ಲಲಿತಕಲೆಗಳ ಸಾಹಿತ್ಯವನ್ನರಿತು ಅಕ್ಷರಗಳಲ್ಲಿ ಮೂಡಿಸಬೇಕಾಗುತ್ತದೆ. ಕಲೆ ಮತ್ತು ಸಾಹಿತ್ಯ ಎರಡು ವಿಶಾಲವಾದ ತನ್ನದೇ ಆದ ಹರವುಳ್ಳದ್ದಾಗಿರುತ್ತದೆ.

ಚಿತ್ರ-ಶಿಲ್ಪ-ಸಾಹಿತ್ಯ ಈ ಮೂರರಲ್ಲಿ ಮುಪ್ಪರಿಗೊಂಡು ಅಪಾರ ಕೆಲಸ ಮಾಡಿರುವ ಶಿವಲಿಂಗಪ್ಪನವರು ಹಲವಾರು ಏಕವ್ಯಕ್ತಿ, ಗುಂಪು ಪ್ರದರ್ಶನ ಮತ್ತು ಶಿಬಿರಗಳಲ್ಲಿ ಭಾಗವಹಿಸುವಿಕೆ. ಪ್ರಾತ್ಯಕ್ಷಿಕೆ ನೀಡುವಿಕೆ ಸೇರಿದಂತೆ ರಾಜ್ಯದ ಹಲವಾರು ಕಡೆ ಪ್ರದರ್ಶಿಸಿದ್ದಾರೆ. ವಚನಗಳಿಗೆ ಸೂಕ್ತವಾದ ಚಿತ್ರರಚಿಸಿ ಅಕ್ಲೆಂಡ್, ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮುಂತಾದ ಕಡೆ ಪ್ರದರ್ಶಿಸಿದ್ದಾರೆ. ಪುಸ್ತಕರೂಪದಲ್ಲಿ ಸಹ ಪ್ರಕಟಿಸಿದ್ದಾರೆ. ಸಿಂಪರಣೆ ಚಿತ್ರಗಳು ಇವರ ಮತ್ತೊಂದು ವಿಶೇಷತೆ. ಪತ್ರಿಕೆಗಳಿಗೆ ನೂರಾರು ಸಂದರ್ಭ ಚಿತ್ರಗಳನ್ನು ಬರೆದಿರುವುದಲ್ಲದೇ ಮರಳಚ್ಚು-ಥರ್ಮಾಕೋಲ್, ಪಿ.ವಿ.ಸಿ. ಪೈಪಗಳಂತಹುಗಳಲ್ಲಿ ಶಿಲ್ಪಗಳನ್ನು ಮಾಡಿ ತಮ್ಮದೇ ಆದ ಹೊಸತನ್ನು ಹುಟ್ಟು ಹಾಕಿದ್ದಾರೆ.

ಉದಯವಾಣಿ ಪತ್ರಿಕೆಯಲ್ಲಿ ನಮ್ಮ ಕಲಾವಿದರು ಅಂಕಣ ಬರಹದ ಮೂಲಕ ನೂರಾರು ಕಲಾವಿದರನ್ನು ಶಿಲ್ಪಿಗಳನ್ನು ಪರಿಚಯಿಸಿದ್ದಾರೆ. ಹತ್ತಕ್ಕು ಮೇಲ್ಪಟ್ಟು ಪುಸ್ತಕ ಪ್ರಕಟವಾಗಿವೆ. ಕರ್ನಾಟಕದ ಕಲಾಬೆಳವಣಿಗೆ ಕುರಿತ ಸಮಗ್ರ ಮಾಹಿತಿಯನ್ನೊಳಗೊಂಡ ಪುಸ್ತಕ ಕಲಾಸಾಹಿತ್ಯಾಶಕ್ತರಿಗೆ ಮಾರ್ಗದರ್ಶಿ ಗ್ರಂಥವಾಗಿದೆ. ಆಚಾರ್ಯ ಚಿತ್ರಕಲಾ ಭವನದ ಗೌರವ ಪ್ರಾಚಾರ್ಯರಾಗಿ ಹಲವಾರು ಶಿಷ್ಯರನ್ನು ತಯಾರು ಮಾಡಿದ್ದಾರೆ.

ಜಿ.ಎಂ. ಹೆಗಡೆ
ಹಿರಿಯ ಕಲಾವಿದ
ಶಿರಸಿ, ಉ.ಕ.





ಕ್ಷಿಪ್ರ ರೇಖಾ ಚಿತ್ರ ನಿಪುಣ

ಮ. ಈ. ಗುರು

ಮಹಾತ್ಮ ಗಾಂಧಿಯವರನ್ನು ಸ್ವತಃ ನೋಡದಿದ್ದರೂ ಅವರು ಕೊಡುತ್ತಿದ್ದ ಸಂದೇಶ ಇಲ್ಲವೇ ಚಳುವಳಿಗೆ ಕರೆಗೆ ಮನ್ನಣೆ ಇತ್ತು. ಅವರ ಮುಖಚಿತ್ರವನ್ನೇ ಮೆರವಣಿಗೆಯಲ್ಲಿ ಕೊಂಡೊಯ್ದು ಆಂದೋಲನ ನಡೆಸುತ್ತಿದ್ದವರು ಸ್ವಾತಂತ್ರ್ಯಾಭಿಮಾನಿಗಳು ಹಾಗೂ ವಿದ್ಯಾರ್ಥಿಗಳು. ಭಾರತಾದ್ಯಂತ ನಡೆಯುತ್ತಿದ್ದ ಕ್ವಿಟ್ ಇಂಡಿಯಾ ಚಳುವಳಿ, ಉಪ್ಪಿನ ಸತ್ಯಾಗ್ರಹ, ಸ್ವದೇಶಿ ಉಡುಪನ್ನೇ ಧರಿಸಿ, ಬಿಳಿಯರೇ ಭಾರತ ಬಿಟ್ಟು ತೊಲಗಿ, ಸ್ವಾತಂತ್ರ್ಯ ನಮ್ಮ ಹಕ್ಕು ಇತ್ಯಾದಿ ಶೀರ್ಷಿಕೆಯ ಘೋಷಣೆಗೆ ಮಾರುಹೋಗಿ ಮನೆ ಮಠ ತೊರೆದು ಗಾಂಧೀಜಿಯವರ ಹಿಂಬಾಲಕರಾದದ್ದು, ಸಾವಿರಾರು ಮಂದಿ. ಗಾಂಧೀಜಿಯವರ ಅಹಿಂಸಾ ಮಾರ್ಗಕ್ಕೆ ಕೆಲವರು ಬದ್ಧರಾದರೇ ಇನ್ನಿತರ ಮಂದಿ ಹೋರಾಟವೊಂದೇ ದಾರಿ ಎಂದು ಮಂತ್ರಿಸಿದರೆ ಮಾವಿನಕಾಯಿ ಉದರುವುದಿಲ್ಲ ಕಲ್ಲು ಹೊಡೆಯಲೇಬೇಕು ಎಂಬ ನಿರ್ಧಾರಕ್ಕೆ ಬಂದಿದ್ದರು. ದುಡಿಯುವ ಕಾರ್ಮಿಕ ವರ್ಗದಿಂದಿಡಿದು ಎಲ್ಲಾ ಸ್ತರಗಳ ಜನರ ಗುರಿ ಮಾತ್ರ ಒಂದೇ ಅದುವೇ ಸ್ವಾತಂತ್ರ್ಯ ಪಡೆಯಬೇಕು. ಒಬ್ಬೊಬ್ಬರದು ಒಂದು ಬಗೆಯ ಹೋರಾಟ. ಕೆಲವರು ಮುಂಚೂಣಿಯಲ್ಲಿ ಕಾಣಿಸಿಕೊಂಡರೇ ಹಲವರು ಕಣ್ಗೇ ಕಾಣಿಸಿದಂತೆ ಗುಪ್ತಚಾರರಾಗಿ ಬ್ರಿಟಿಷ್ ಆಳರಸರೊಡನೆಯೇ ಇದ್ದು ಆಡಳಿತಾಂಗದ ಒಳಗುಟ್ಟನ್ನು ಹೋರಾಟಗಾರರಿಗೆ ರವಾನಿಸುತ್ತಿದ್ದರು.

ಚಿತ್ರ ಬರೆಯುವ ಕಲಾವಿದರು ಸಹ ಹೋರಾಟದಲ್ಲಿದ್ದರೆಂಬುದಕ್ಕೆ ಹಳೆಯ ಮೈಸೂರು ಪ್ರಾಂತ್ಯದಿಂದ ಮೂವರ ಹೆಸರನ್ನು ಗುರ್ತಿಸಬಹುದಾಗಿದೆ. ದಿ॥ ಆರ್.ಎಸ್. ನಾಯ್ಡು ಅವರು ಪೂನಾದ ಪರ್ಗುಸನ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಯೂತ್ ಕಾಂಗ್ರೆಸ್ ಸೇರಿ ಚಳುವಳಿಯಲ್ಲಿ ಭಾಗವಹಿಸಿ ೧೯೩೦ ಮತ್ತು ೩೪ರಲ್ಲಿ ಜೈಲಿನಲ್ಲಿ ಕಠಿಣಶಿಕ್ಷೆ ಅನುಭವಿಸಿದರು. ೧೯೪೪ರಲ್ಲಿ ಯರವಾಡ ಜೈಲಿನ ಸುಖ ಕಂಡವರು. ಗಾಂಧೀಜಿ, ಮಹದೇವ ದೇಸಾಯಿ, ಜಮನಾಲಾಲ್ ಬಜಾಜ್, ಅಶೋಕಮೆಹ್ತಾ, ಡಿ.ಜಿ. ತೆಂಡೂಲ್ಕರ್, ಯುಸೋಫ ಮೆಹರಾಲಿ ಮುಂತಾದ

ಗಣ್ಯ ಚಳುವಳಿ ನಾಯಕರ ಒಡನಾಟವಿಟ್ಟುಕೊಂಡಿದ್ದವರು. ನಂತರದಲ್ಲಿ ಮಾರ್ಕ್ಸ್‌ವಾದಕ್ಕೆ ಮನಸೋತು ಕಾಂಗ್ರೆಸ್ ದಿನಾಚರಣೆಯಂದು ಲೆನಿನ್ ಮೂರ್ತಿಯನ್ನು ಸೆರೆಮನೆಯಲ್ಲಿಯೇ ಸಿಕ್ಕ ಜೇಡಿಮಣ್ಣಿನಿಂದ ಮಾಡಿ ಅಲ್ಲಿನ ಜೈಲು ಅಧಿಕಾರಿಗಳ ಕೆಂಗಣ್ಣಿಗೆ ಪಾತ್ರರಾದವರು. ಹಲವಾರು ತೆರನ ಹಿಂಸೆ ಅನುಭವಿಸಿದರೂ ಜೈಲಿನಲ್ಲಿ ಇದ್ದಾಗ, ಹಾಗೂ ಸ್ವಾತಂತ್ರ್ಯಾನಂತರದಲ್ಲೂ ಚಿತ್ರಕಲೆ, ಮತ್ತು ಶಿಲ್ಪಕಲೆಯತ್ತಲೇ ಗಮನಹರಿಸಿ ತಮ್ಮದೇ ಆದ ಶೈಲಿಯನ್ನು ನಿರ್ಮಿಸಿ ಕಲಾವಲಯದಲ್ಲೊಂದು ಧೃವತಾರೆಯಾಗಿ ಕಾಣಿಸುವಂತಾದರು. ಜೀವನದ ಆರಂಭ ಅಂತ್ಯಗಳನ್ನು ಮೈಸೂರಿನಲ್ಲೇ ಕಳೆದ ಇವರು (೫-೨೭-೮-೧೯೦೬, ಮ. ೬-೧೦-೧೯೮೫) ರಾಷ್ಟ್ರಮಟ್ಟದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರೆಂಬುದು ಹೆಮ್ಮೆಯ ಸಂಗತಿ.

ಎರಡನೆಯುವವರಾದ ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರದ ದಿ॥ ರುಮಾಲೆ ಚೆನ್ನಬಸವಯ್ಯನವರು ೧೯೩೦ರ ಸತ್ಯಾಗ್ರಹದಲ್ಲಿ ಭಾಗವಹಿಸಿದ ಪರಿಣಾಮ ಬಿಜಾಪುರದಲ್ಲಿನ ಜೈಲಿನಲ್ಲಿ ಕೆಲವು ತಿಂಗಳು ಮತ್ತೆ ಮಹಾರಾಷ್ಟ್ರದ ಅಹಮದ್‌ನಗರದಲ್ಲಿನ ವಿಜಾಪುರ ಜೈಲಿನಲ್ಲಿ ರಾಜಕೀಯ ಖೈದಿಯಾಗಿ ಶಿಕ್ಷೆ ಅನುಭವಿಸಿ ನಂತರದಲ್ಲಿ ೧೯೩೯-೪೦ರ ಸುಮಾರಿನಲ್ಲಿ ಬೆಂಗಳೂರಿನ ಸೆಂಟ್ರಲ್ ಜೈಲು, ಬೈರಮಂಗಲ ಕ್ಯಾಂಪ್ ಜೈಲುಗಳಲ್ಲಿ ಸೆರೆಮನೆಯ ಸವಿಯನ್ನು ಕಂಡವರು. ಸ್ವಾತಂತ್ರ್ಯಾನಂತರ ಕಲೆಗೆ ತಮ್ಮನ್ನು ಪೂರ್ಣ ತೊಡಗಿಸಿಕೊಂಡು ಭೂದೃಶ್ಯ ಚಿತ್ರರಚನೆಯನ್ನು ತಮ್ಮದೇ ಆದ ಶೈಲಿಯಿಂದ ಪ್ರಚಾರ ಪಡೆದು ವಿಧಾನ ಪರಿಷತ್ ಸದಸ್ಯರಾಗಿ ಹಾಗೂ ಹಲವು ಸರ್ಕಾರಿ ಸಮಿತಿಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದು ಕಲಾ ಬೆಳವಣಿಗೆಗೆ ಕಾರಣರಾಗಿದ್ದರು. (೧೯೧೦-೧೯೮೮).

ಮೂರನೇಯವರಾದ ಎಂ. ಈ. ಗುರು ಅವರಾದರೋ ಸ್ವಾತಂತ್ರ್ಯ ನಂತರದಲ್ಲಿ ಈ ಈರ್ವರನ್ನು ಸನಿಹದಿಂದ ಕಂಡವರು. ಕಲಾ ಚಟುವಟಿಕೆಗಳಲ್ಲಿ ಸಕ್ರೀಯವಾದವರು. ಅದಕ್ಕಿಂತ ಪೂರ್ವದ ವಿದ್ಯಾರ್ಥಿ ದೆಶೆಯಲ್ಲಿ ಜೈಲಿನಲ್ಲಿದ್ದಾಗ ಗಾಂಧೀಜಿಯವರ ಚಿತ್ರವನ್ನು ಇದ್ದಲ ಮಸಿಯಿಂದ ಗೋಡೆ ಮೇಲೆ ಬರೆದು ಜೈಲರ್‌ನಿಂದ ಛೀಮಾರಿ ಹಾಕಿಸಿಕೊಂಡು ವಿವಿಧ ನೆಲೆಯಲ್ಲಿ ಹೋರಾಟ ಮಾಡುತ್ತಲೇ ಚಿತ್ರಕಲಾ ಕಲಿಕೆ ಮಾಡಿದ ರೋಚಕ ವಿಷಯಗಳನ್ನು ಮುಂದಿನ ಪುಟಗಳಲ್ಲಿ ಓದಬಹುದು.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಮುದ್ದಾಪುರ ಇವರು ಹುಟ್ಟಿದ ಊರು. ಹುಟ್ಟಿದ ಮಕ್ಕಳೆಲ್ಲವೂ ಸಾಯುತ್ತಿದ್ದುದರಿಂದ ಅವರ ತಾಯಿ ಚಿಂತಾಕ್ರಾಂತವಾಗಿದ್ದಾಗ ಅವರ ಮನೆ ಗುರುಗಳಾದ ಆದ್ವಾನಿ ಗವೀಮಠದ



ಸ್ವಾಮಿಗಳು ತಾಯಿ ನೀ ಚಿಂತಿಸಬೇಡ. ನಿನಗೊಬ್ಬ ಮಗ ಹುಟ್ಟುತ್ತಾನೆ ಅವನನ್ನು ನಮ್ಮಲ್ಲಿಗೆ ಕಳಿಸಿಕೊಡು. ನಾವೇ ಸಾಕಿ ವಿದ್ಯಾವಂತನನ್ನಾಗಿ ಮಾಡಿ ಮಠದ ಅಧಿಪತಿಯನ್ನಾಗಿ ಮಾಡುತ್ತೇವೆಂದು ಸಾಂತ್ವನ ಹೇಳಿ ಮುಂದೆ ಸಾಗಿದರು. ಕೆಲ ತಿಂಗಳ ನಂತರ ಜನಿಸಿದವರೇ (೧೯೨೩) ಗುರುಪಾದಯ್ಯ. ತಂದೆ ಮಠದ ಈಶ್ವರಯ್ಯನವರು ಧಾರ್ಮಿಕ ನೆಲೆಗಟ್ಟಿನಲ್ಲಿ ತೊಡಗಿಸಿಕೊಂಡು, ಭಜನೆ, ಸಂಕೀರ್ತನೆ, ಧ್ಯಾನ, ಧಾರಣ, ಪಠಣಗಳಲ್ಲಿ ತೊಡಗಿಸಿಕೊಂಡವರಾದ್ದರಿಂದ ಅದೇ ಸಂಸ್ಕಾರ ಬಾಲಕ ಗುರುಪಾದಯ್ಯನಿಗೂ ಅನೂಚಾನವಾಗಿ ಬಂದಿತ್ತು. ಮೂರ್‍ನಾಲ್ಕು ವರ್ಷ ಕಳೆಯುತ್ತಿದ್ದಂತೆ ಗುರುಗಳು ಬಂದು ಮಗನನ್ನು ಕಳಿಸಿಕೊಡಿ ಎಂದು ಕೇಳಿದಾಗ ತಾಯಿಗೆ ಹೇಳತೀರದ ಸಂಕಟ. ಇದನ್ನರಿತ ಗುರುಗಳು ನೀವೇ ಕರೆದುಕೊಂಡು ಬಂದು ಮಠಕ್ಕೆ ಬಿಡಿ. ಇಲ್ಲವೆ ಕೆಲವು ತಿಂಗಳ ನಂತರ ಬರುವೆನೆಂದು ತಿಳಿಸಿ ಮುನ್ನಡೆದರು. ಇಂದು ನಾವು ಕಾಣುವ/ಕೇಳುವ ರೀತಿಯಾದ ಕುಟುಂಬದ ಜವಾಬ್ದಾರಿಯುತ ಸ್ಥಾನದಲ್ಲಿರುವವರಲ್ಲಿ ಯಾರಾದರೂ ಸತ್ತರೆ ನಿನ್ನನ್ನೆ ನಂಬಿ ನಾ ಜೀವಿಸುತ್ತಿದ್ದೆ. ನೀನೇ ಹೋದ ಮೇಲೆ ನಾನಾದರೂ ಇರುವುದಾದರೂ ಏತಕ್ಕೆ? ಈ ಆಸ್ತಿಪಾಸ್ತಿ ಕಟ್ಟಿಕೊಂಡು ಏನು ಮಾಡಲಿ ಎಂದು ಗೋಳಿಡುತ್ತಲೇ ತನ್ನಲ್ಲಿನ ಒಂದು ವಸ್ತುವು ಹೊರಹೋಗದಂತೆ ತನ್ನಲ್ಲಿಯೇ ಇಂಬಿಟ್ಟುಕೊಳ್ಳುವ ಪ್ರಯತ್ನ ಮಾಡುವುದು ಎಲ್ಲರಿಗೂ ತಿಳಿದ ವಿಷಯ. ಇದಕ್ಕೆ ಕ್ಷಣಿಕ ವೈರಾಗ್ಯ ಅಥವಾ ಸ್ಮಶಾನ ವೈರಾಗ್ಯ ಎಂದೆಲ್ಲಾ ಸಾಹಿತ್ಯಿಕವಾಗಿ ಸಂಬೋಧಿಸುತ್ತಾರೆ. ಇಂತಹದ್ದೆ ಸನ್ನಿವೇಷ ಗುರುಪಾದಯ್ಯನವರ ಮಾತಾಪಿತೃಗಳಲ್ಲಿ ಆಗಿತ್ತು. ಬಾಲಕನ ಲವಲವಿಕೆ ಚೂಟಿತನ, ಹೇಳಿದ್ದನ್ನು ಚಾಚೂತಪ್ಪದೆ ಮಾಡುವ ಗುಣ ಅವರನ್ನು ಆಕರ್ಶಿಸಿತ್ತು. ಮಗನನ್ನು ಮಠಕ್ಕೆ ಕಳಿಸಲು ಸಾಧ್ಯವಿಲ್ಲವೆಂದು ಹೇಳುವ ಬಗೆಯಾದರೂ ಹೇಗೆಂದು ಚಿಂತಿಸಿ ಮರುದಿನವೆ ಪಕ್ಕದ ಊರಿನಲ್ಲಿದ್ದ ಸಹೋದರಿಯ ಮನೆಗೆ ಕಳಿಸುವ ಏರ್ಪಾಡು ಮಾಡಿ ಅಲ್ಲಿಯೇ ಶಾಲೆಗೆ ಸೇರಿಸುತ್ತಾರೆ. ಕೆಲ ತಿಂಗಳ ನಂತರ ಗುರುಗಳು ಬಂದಾಗ ಗುರುಪಾದಯ್ಯ ಊರಿನಲ್ಲಿಲ್ಲವೆಂಬುದನ್ನು ತಿಳಿದು ಮತ್ತೋರ್ವ ಮರಿಯನ್ನು ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳುತ್ತಾರೆ. ಅದಾದ ಕೆಲವೇ ತಿಂಗಳುಗಳಲ್ಲಿ ಗುರುಗಳು ಸಹ ಶಿವೈಕ್ಯರಾಗುತ್ತಾರೆ. ಅಲ್ಲಿಗೆ ಮಠಕ್ಕೆ ಹೋಗುವ ಸನ್ಯಾಸಿಯಾಗುವ ಎಲ್ಲಾ ಅವಕಾಶಗಳು ತಪ್ಪಿದವು. ಆದರೆ ಮುಂದಿನ ದಿನಗಳಲ್ಲಿ ಜೀವನದಲ್ಲಿ ಮದುವೆಯೇ ಆಗದೆ ಉಳಿದಿರುವುದು ಮತ್ತೊಂದು ಬಗೆಯ ವಿಸ್ಮಯ.

ಕಲೆಯತ್ತ ಒಲವು



ಬಳ್ಳಾರಿಯ ಸಂತ ಜೋಸೆಪ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ.ವರೆಗೆ ಓದಿದರೂ ಉತ್ತೀರ್ಣನಾಗಲಿಲ್ಲ. ಆ ವೇಳೆಗಾಗಲೇ ಕುಟುಂಬ ಸಮಸ್ಯೆ ಅಧಿಕವಾಗಿತ್ತು. ಮನಸ್ಸಿನ ತುಡಿತ ಓದಿಗಿಂತ ಕಂಡದ್ದನ್ನು ಕಂಡ ಹಾಗೆ ಚಿತ್ರಿಸುವ ತವಕ. ಪುಸ್ತಕಗಳಲ್ಲಿ ಮುದ್ರಣವಾದುದ್ದನ್ನು ಯತಾರೀತಿ ಬರೆಯುವ ಗೀಳು, ಶಾಲೆಯ ಪುಸ್ತಕದ ಮೇಲೆ ಮತ್ತು ಗೋಡೆಗಳ ಮೇಲೆಲ್ಲಾ ಚಿತ್ತಾರಗಳೇ, ತೋಚಿದ್ದನ್ನು ಗೀಚುವ ಸಂಭ್ರಮದಲ್ಲಿ ಒಡೆತ, ಒದೆತ, ಬಡಿತ, ಬೈಗುಳ ಇವೆಲ್ಲಾ ತೃಣವಾಗಿ ಕಾಣುವಂತಾಗಿತ್ತು. ಕೆಲಸವು ಎಲ್ಲೂ ದೊರಕಲಿಲ್ಲವಾದ್ದರಿಂದ ಕೆಲಸಮಯ ಮನೆಯಲ್ಲಿದ್ದ ದನಕರುಗಳನ್ನು ಮೇಯಿಸುವ ಜವಾಬ್ದಾರಿ ಹೊರಬೇಕಾಗುತ್ತದೆ. ಆ ವೇಳೆಗೆ ಸುಪ್ರಸಿದ್ದ ಕಾದಂಬರಿಕಾರ ಗಳಗನಾಥರ 'ಮರೆತುಹೋದ' ಸಾಮ್ರಾಜ್ಯ ಕನ್ನಡಿಗರ ಕರ್ಮಕತೆ ಈ ಕಾದಂಬರಿಗಳನ್ನು ಓದಿ ಸ್ಫೂರ್ತಿ ಪಡೆಯುತ್ತಾರೆ. ಸಮೀಪದಲ್ಲಿದ್ದ ಹಂಪೆಗೆ ಆಗಾಗ್ಗೆ ಹೋಗಿ ಅಲ್ಲಿನ ಕಲಾ ವೈಭವವನ್ನು ಕಣ್ತುಂಬಿಸಿಕೊಳ್ಳುವುದು ಅಲ್ಲಿನ ಪ್ರವಾಸಿಗರು ಮಾತಾಡುವುದನ್ನು ಕೇಳಿ ಮನದುಂಬಿಸಿಕೊಳ್ಳುವುದು ಸೇರಿದಂತೆ ಕಲಾಭಿರುಚಿ ಆಳವಾಗಿ ಬೇರೂರಲು ಕಾರಣವಾಯಿತು.

ಹೊಸಪೇಟೆಯ ಸಂತೆಗೆ ಹೋಗಿದ್ದಾಗ ಅಲ್ಲಿದ್ದ ವರ್ಣಚಿತ್ರವೊಂದನ್ನು ನೋಡಿ ಕುತೂಹಲದಿಂದ ಮುಟ್ಟಿ ಮುಟ್ಟಿ ನೋಡುತ್ತಿದ್ದಾಗ ಗದರಿದ ಮಾಲಿಕನಿಂದಾಗಿ ಬೇಸತ್ತು ನಾನು ಎಂದಾದರೂ ಇಂತಹದೊಂದು ಬಣ್ಣದ ಚಿತ್ರ ಬರೆಯಲೇಬೇಕೆಂಬ ಉತ್ಸಾಹವುಂಟಾಗಿ ಯಾವುದಾದರೊಂದು ಕಲಾಶಾಲೆಗೆ ಸೇರಲಿಚ್ಛಿಸಿದಾಗ ಎದುರಾದದ್ದು ಯಾರು ನನ್ನನ್ನು ಸೇರಿಸಿಕೊಳ್ಳುತ್ತಾರೆ ಎಂಬ ಚಿಂತೆ. ಆಗ್ಗೆ ಧಾರವಾಡದ ಡಿ.ವಿ. ಹಾಲಬಾವಿಯವರ ಕಲಾಶಾಲೆ ಬೆಂಗಳೂರಿನ ಅ.ನ. ಸುಬ್ಬರಾಯರ ಕಲಾಮಂದಿರ, ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆ ಇವೇ ಪ್ರಮುಖವಾಗಿದ್ದವುಗಳಾಗಿದ್ದವು. ಅವರಿವರನ್ನು ಕಾಡಿ ಬೇಡಿ ಶಿಫಾರಸ್ಸು ಪತ್ರವೊಂದನ್ನು ಪಡೆದು ಬೆಂಗಳೂರಿನ ರೈಲನ್ನು ಹತ್ತಿದ್ದಾಯಿತು. ಚಿಕ್ಕಪೇಟೆಯಲ್ಲಿರುವ ರಂಭಾಪುರಿ ಪೀಠದ ಶಾಖೆಯಾದ ಮಹಂತಿನ ಮಠದಲ್ಲಿ ಹಾಗೂ ಹೀಗೂ ಅವಕಾಶ ದೊರಕಿಸಿಕೊಂಡು ಅ.ನ.ಸು.ರವರನ್ನು ಕಂಡು ತಮ್ಮ ಅಳಲನ್ನು ತೋಡಿಕೊಂಡಾಗ ಹತ್ತು ರೂ.ಗಳ ಪ್ರವೇಶ ಪಡೆದು ಸೇರ್ಪಡೆಗೆ ಒಪ್ಪಿದರಾದರೂ ಒಂದು ಕಡ್ಡಾಯ ನಿಯಮವ–

ನ್ನೇಳಿದ್ದರು. ಆಗ್ಗೆ ಧರ್ಮರಾಯನ ದೇವಸ್ಥಾನದ ಬಳಿಯಲ್ಲಿದ್ದ ಆ ಕಲಾಮಂದಿರ ಒಂದು ಬಗೆಯ ವೃತ್ತಿ ಶಿಕ್ಷಣ ಶಾಲೆಯಂತೆಯೂ ನಿರ್ವಹಿಸುತ್ತಿತ್ತು. ಚಿತ್ರಗಳಿಗೆ ಚೌಕಟ್ಟು (ಫೋಟೋ ಫ್ರೇಂ) ತಯಾರಿಕೆಗೆ ಬೇಕಾಗುವ ಹಲಸಿನ ಮರವನ್ನು ಕೊಯಿಸಿ ತಂದು ಒಣಗಿಸಿದ ನಂತರ ಅವಶ್ಯಕತೆಗನುಗುಣವಾಗಿ ಹದಗೊಳಿಸುವ ಕೆಲಸವಾಗಿತ್ತು. ಚಿಕ್ಕಂದಿನಿಂದಲೂ ಕೆಲಸ ಮಾಡಿ ಅಭ್ಯಾಸವಿದ್ದುದರಿಂದ ಒಪ್ಪಿಕೊಂಡ ಇವರು ಒಂದೆರಡು ವರ್ಷ (೧೯೩೯-೪೧) ಚಿತ್ರಕಲಾಭ್ಯಾಸದ ಜೊತೆಜೊತೆಗೆ ಒಪ್ಪಿಸಿದ ಕೆಲಸವನ್ನು ಮಾಡುತ್ತಲೇ ಮದ್ರಾಸ್ ಪರೀಕ್ಷೆ ಪೂರೈಸಿದರು. ಆ ವೇಳೆಗಾಗಲೇ ಬಹಳ ಬೇಸರವು ಆಗಿತ್ತು. ತಿಂಗಳ ಶುಲ್ಕಕ್ಕೆ ರಿಯಾಯಿತಿ ನೀಡಿದ್ದಾರೆಂಬುದು ನಿಜವಾದರೂ ಅದಕ್ಕಿಂತ ಹಲವು ಪಟ್ಟು ಅಧಿಕವಾದ ಕೆಲಸ ತೆಗೆದುಕೊಳ್ಳುತ್ತಿದ್ದರು. ಕಲಾ ಕಲಿಕೆಗಿಂತ ಕೆಲಸಕ್ಕೆ ಹೆಚ್ಚಿನ ಸಮಯ ವಿನಿಯೋಗವಾಗುತ್ತಿತ್ತು. ತತ್ಪರಿಣಾಮ ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಗೋಗಲು ನಿರ್ಧರಿಸಿದಾಗ ಮತ್ತೆ ಎದುರಾದದ್ದು ವಸತಿ ಸಮಸ್ಯೆ. ಮಠ ಮಾನ್ಯಗಳ ಹುಡುಕಾಟದ ಆರಂಭ.

ಸಾಮಾನ್ಯವಾಗಿ ವೀರಶೈವ ಮಠಗಳು ವಿದ್ಯಾಭ್ಯಾಸ ಮತ್ತು ದಾಸೋಹಕ್ಕೆ ಮಹತ್ವ ನೀಡುತ್ತಿದ್ದವು. ಅದು ಇಂದಿಗೂ ಹೆಚ್ಚಿನ ಪ್ರಮಾಣದಲ್ಲಿಯೇ ನಾಡಿನಾದ್ಯಂತ ಇವೆ. **'ಅನ್ನ ದಾಸೋಹಕ್ಕಿಂತ ಮುನ್ನ ದಾಸೋಹವಿಲ್ಲ ಅನ್ನತೋ ಪ್ರಾಣಃ ಪ್ರಾಣತೋ ಪರಾಕ್ರಮಃ'** ಎಂಬ ಉಕ್ತಿಯಂತೆ ಮೊದಲು ಹಸಿದವನಿಗೆ ಅನ್ನ ನೀಡುವ ಸಂಪ್ರದಾಯವಿದೆ. ಇದು ೧೨ನೇ ಶತಮಾನದ ಬಸವಾದಿ ಶರಣದಿಂದ ಬಂದ ಸತ್ ಸಂಪ್ರದಾಯ. ಈ ಹಿನ್ನಲೆಯಲ್ಲಿಯೇ ಬೆಟ್ಟದಪುರದ ಸ್ವಾಮೀಜಿವರು ಸ್ಥಾಪಿಸಿದ್ದ ಉಚಿತ ವಿದ್ಯಾರ್ಥಿ ನಿಲಯದಲ್ಲಿ ಅವಕಾಶ ಸಿಗುತ್ತದೆ. ಅನ್ನ ಸಮಸ್ಯೆ ಬಗೆಹರಿದ ನಂತರ ಶಾಲೆಗೆ ಸೇರುವ ಯತ್ನದಲ್ಲಿ ಯಶಸ್ವಿ. ಈ ಮೊದಲೇ ಅ.ನ.ಸು.ರವರ ಕಲಾಮಂದಿರದಲ್ಲಿ ಎರಡು ವರ್ಷದ ಶಿಕ್ಷಣ ಪೂರೈಸಿದುದನ್ನು ಗಣನೆಗೆ ತೆಗೆದುಕೊಂಡು ೩ನೇ ವರ್ಷದ ಶಿಕ್ಷಣಕ್ಕೆ ಸೇರ್ಪಡೆಯಾಯಿತು. ಆಗ್ಗೆ ಎನ್.ಜಿ. ಪಾವಂಜೆಯವರು (ಸೂಪರಿಂಟೆಂಡೆಂಟ್) ಮುಖ್ಯಸ್ಥರಾಗಿದ್ದರೇ ವೈ. ಸುಬ್ರಹ್ಮಣ್ಯರಾಜು, ಎಸ್. ನಂಜುಂಡಸ್ವಾಮಿ ನಂತರದಲ್ಲಿ ಎಫ್.ಎಂ. ಸೂಫಿ, ಕೇಶವಮೂರ್ತಿ ಕಲಾ ಗುರುಗಳಾಗಿದ್ದರು.

ಸ್ವಾತಂತ್ರ್ಯ ಹೋರಾಟದತ್ತ ತಿರುವು

ಆಗ್ಗೆ ಪರಿಚಯವಾದ ಟಿ.ಎಸ್. ಸುಬ್ಬಣ್ಣನವರಿಂದ ನನ್ನ ಬದುಕಿನಲ್ಲಿ ಒಂದು ಮಹತ್ತರ ತಿರುವನ್ನು ಪಡೆಯಿತ್ತೆನ್ನುತ್ತಾರೆ. ಚಿತ್ರಕಲಾಭ್ಯಾಸವೇ ನನ್ನ ಗುರಿಯಾಗಿದ್ದುದರ ಜೊತೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು

ಪ್ರೇರಣೆ ದೊರೆಯಿತು. ಮಹಾತ್ಮಾ ಗಾಧೀಜಿಯವರ 'ಯುವಕರೇ ನೀವು ಏದ್ದೇಳುವವರೆಗೆ ಸ್ವಾತಂತ್ರ್ಯ ದೊರಕದು'. ಶಾಲಾಕಾಲೇಜನ್ನು ತೊರೆದು ಬನ್ನಿ. ಎಂಬ ಸಂದೇಶ ಇದು ಗುರು ಅವರ ಮನಸ್ಸಿನಲ್ಲಿ ಅಗಾದ ಪರಿಣಾಮ ಬೀರಿತ್ತು. ಚಳುವಳಿಗಾರ ಸುಬ್ಬಣ್ಣನವರ ಕುಮ್ಮಕ್ಕು ದೊರೆತದ್ದು ಹಾಲುಜೇನು ಬೆರತಂತಾಗಿತ್ತು. ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಿಂದ ಹುಡುಗರನ್ನು ಸಂಘಟಿಸಿಕೊಂಡು ಮೆರವಣಿಗೆ ನಡೆಸುವುದು ಶಾಲೆ ಮುಂದೆ ಹಾಗೂ ವೃತ್ತ ಮತ್ತು ಚೌಕಗಳಲ್ಲಿ ನಿಂತು ಘೋಷಣೆ ಕೂಗುವುದು– 'ವಂದೇಮಾತರಂ' ಎನ್ನುತ್ತಾ ಮುನ್ನುಗ್ಗುವುದು ಪೊಲೀಸರಿಂದ ವದೆ ತಿಂದು ಸ್ಟೇಷನ್‌ನಲ್ಲಿ ಒಂದೆರಡು ಗಂಟೆ ಅಥವಾ ದಿನಪೂರ್ತಾ ಇದ್ದು ಬರುವುದು, ಮಾರನೇ ದಿನವೂ ಅದೇ ದಿನಚರಿ. ಹೀಗೆ ಘೋಷಣೆ ಕೂಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಬೇಕೆಂಬ ಸಂದೇಶ ಹಿರಿಯನಾಯಕರಿಂದ ಬರತೊಡಗಿತು. ಎಚ್.ಸಿ. ದಾಸಪ್ಪ ಯಶೋದರಮ್ಮ ಮುಂತಾದವರು ರಹಸ್ಯ ಕಾರ್ಯಾಚರಣೆಯ ಮಾರ್ಗ ಬೋದಿಸಿದರು. (೧೯೪೨ ಕ್ವಿಟ್ ಇಂಡಿಯಾ ಚಳುವಳಿ)

ವಿದ್ಯಾರ್ಥಿ ನಿಲಯದಲ್ಲಿ ರಾತ್ರಿ ಏಳೆಂಟು ಗಂಟೆಯೊಳಗಾಗಿ ಊಟ ನೀಡುತ್ತಿದ್ದರು. ನಂತರದಲ್ಲಿ ಮಿತ್ರ ಸುಬ್ಬಣ್ಣನವರೊಡಗೂಡಿ ಏಳೆಂಟು ಮೈಲಿ ದೂರವಿರುವ ಪಡುವಾರಳ್ಳಿಗೆ ಕಾಲ್ನಡಿಗೆಯಲ್ಲಿ ಪಯಣ. ಇವರು ಬರುವುದನ್ನೇ ಕಾಯುತ್ತಿದ್ದ ದಾಸಪ್ಪನವರು ಒಳಬರಮಾಡಿಕೊಂಡು ಅಂದಂದಿನ ಚಳುವಳಿ ಕಾರ್ಯಾಚರಣೆ ವಿಚಾರಿಸಿ ನಾಳಿನ ಕಾರ್ಯಕ್ಕೆ ನೀಲಿ ನಕಾಶೆ ತೋರುತ್ತಿದ್ದರಂತೆ. ಸೊಗಸಾದ ಊಟವನ್ನಿಕ್ಕಿ ಕೈಗೆ ಹಣವನ್ನು ಕೊಟ್ಟು ಎಚ್ಚರಿಕೆಯಿಂದಿರುವಂತೆ ಹಿತನುಡಿದು ಬೀಳ್ಕೊಡುತ್ತಿದ್ದ ಅಂದಿನ ಆ ಸನ್ನಿವೇಶವನ್ನು ಗುರು ಅವರು ನೆನೆಸಿಕೊಂಡು ಪುಳುಕಿತಗೊಳ್ಳುತ್ತಾರೆ. ಕೆಲವೊಂದು ದಿನ ಭಿತ್ತಿ ಪತ್ರಗಳನ್ನು (ಪೋಸ್ಟರ್ಸ್) ಅಂಟಿಸಿಕೊಂಡು ಪೊಲೀಸರ ಕಣ್ತಪ್ಪಿಸಿ ಸಕಾಲಕ್ಕೆ ಬರಲಿಕ್ಕಾಗದೇ ಮರದಡಿಯಲ್ಲೋ, ಇಲ್ಲವೇ ಯಾರದಾದರೂ ಮನೆಯ ಜಗಲಿಯ ಮೇಲೆ ಮಲಗಿ ಬೆಳಿಗ್ಗೆ ಸೂರ್ಯ ಪೂರ್ವ ದಿಗಂತದಲ್ಲಿ ತನ್ನ ಚಲನೆಯನ್ನು ಪ್ರಾರಂಭಿಸುತ್ತಿದ್ದಂತೆಯೇ ಇವರೀರ್ವರು ತಾವಿದ್ದಲಿಂದ ಹೊರಟು ವಿದ್ಯಾರ್ಥಿ ನಿಲಯಕ್ಕೆ ಇತರರು ಹಾಸಿಗೆಯಿಂದೇಳುವ ಮುನ್ನವೇ ಹಾಜರಾಗಿ ಇಡೀ ರಾತ್ರಿಯೆಲ್ಲಾ ಇಲ್ಲಿಯೇ ಇದ್ದರೇನೋ ಎಂಬ ಭಾವನೆ ಬರುವಂತೆ ಇತರರೊಡನೆ ಮಿಳಿತವಾಗುತ್ತಿದ್ದರೂ, ಅಲ್ಲಿನ ಕಾವಲುಗಾರನ ಕಣ್ತಪ್ಪಿಸಲು ಸಾಧ್ಯವಿಲ್ಲವಾಗಿ ವಿದ್ಯಾರ್ಥಿನಿಲಯದ ಮೇಲ್ವಿಚಾರಕರಿಗೆ ದೂರು ಮುಟ್ಟಿ ಅವರಿಂದ ಹಿಗ್ಗಾ ಮುಗ್ಗಾ ಬೈಸಿಕೊಂಡು ಅನ್ನವಿಲ್ಲದಂತೆ ಶಿಕ್ಷೆ ಗೆ ಒಳಪಟ್ಟಿದ್ದು ಉಂಟು. ಏನಾದರಾಗಲೀ ಗುರಿ ಒಂದೇ ಆಗಿತ್ತು.



ಒಮ್ಮೆ ಚಳುವಳಿ ನಡೆಸುತ್ತಿದ್ದ ಎಲ್ಲಾ ಹುಡುಗರನ್ನು ಮೈಸೂರಿನ ಸೆಂಟ್ರಲ್ ಜೈಲ್‌ಗೆ ಹಾಕಿ ಗಲಾಟೆಯನ್ನು ತಹಬಂದಿಗೆ ತರುವ ಯತ್ನ ಮಾಡಿತ್ತು ಪೊಲೀಸ್ ಇಲಾಖೆ. ಆಗ ಒಂದು ದಿನ ಶ್ರೀ ಶ್ರೀಮದ್ ಜಯಚಾಮರಾಜ ಒಡೆಯರ್‌ರವರ ವರ್ದಂತಿ ಬರಲಿಕ್ಕಾಗಿ ನಗರದ ತುಂಬಾ ಸಿಹಿ ಹಂಚಿಕೆ ಅರಮನೆಯಿಂದಾಗುತ್ತಿತ್ತು. ಅರಮನೆಗೆ ಸಂಬಂಧಿಸಿದ ಎಲ್ಲಾ ಕಛೇರಿಗಳು, ವಿದ್ಯಾಲಯಗಳು ಹಾಗೂ ಸಾರ್ವಜನಿಕರು ಆನಂದೋತ್ಸಾಹದಿಂದ ಅವರ ಛಾಯಚಿತ್ರವೊಂದನ್ನು ಮನೆಯಲ್ಲಿಟ್ಟು ಹೂ ಅರ್ಪಿಸಿ, ನಮ್ಮನ್ನಾಳುವ ನಾಡ ಪ್ರಭುಗಳು ಚಿರಾಯುವಾಗಲಿ ಎಂದು ಶುಭ ಕೋರುವುದು ಸರ್ವೆ ಸಾಮಾನ್ಯವಾಗಿತ್ತು. ಆ ದಿನ ಅವರ ವಯಸ್ಸಿಗೆ ಅನುಗುಣವಾಗಿ ಕುಶಾಲ ತೋಪು ಸಹ ಮೊಳಗುತ್ತಿದ್ದವು. ಜೈಲಿನಲ್ಲಿದ್ದ ಚಳುವಳಿ ವಿದ್ಯಾರ್ಥಿಗಳಿಗೆ ಸಹ ಬರುವುದಾದರೂ ಎಲ್ಲಿ? ಅವರಿಗಾಗಿರುವುದು ಬರೀ ಕಹಿ ಮಾತ್ರ, ಗುರು ಅವರು ಇದನ್ನು ಚಿಂತಿಸಿ ನಾಡಿಗೆ ನಾಡೇ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಹಗಲಿರುಳು ಶ್ರಮಿಸುತ್ತಿರುವಾಗ ರಾಜವೈಭೋಗವಾದರೂ ಏತಕ್ಕೆ? ಇವರ ಪೋಟೋ ಇಡುವ ಬದಲು ಮಹಾತ್ಮಾ ಗಾಂಧೀಜಿವರ ಚಿತ್ರವನ್ನೇಕೆ ಗೌರವಿಸಬಾರದೆಂದು ಆಲೋಚನೆ ಬಂದದ್ದೆ ತಡ ಗೋಡೆ ಮೇಲೆ ಚಿತ್ರರಚಿಸಿ ವಿದ್ಯಾರ್ಥಿಗಳೆಲ್ಲರನ್ನು ಸೇರಿಸಿಕೊಂಡು **'ವಂದೇಮಾತರಂ', 'ಏನೇ ಬರಲಿ ಒಗ್ಗಟ್ಟಿರಲಿ'** ಎಂದು ಘೋಷಣೆ ಕೂಗುತ್ತಿದ್ದಂತೆ ಜೈಲಿನ ಅಧಿಕಾರಿಗೆ ತಿಳಿದು ಇದನ್ನು 'ಅಳಿಸುತ್ತಿಯೋ ಇಲ್ಲವೋ' ಎಂದು ವಾಗ್ವಾದಕ್ಕಿಳಿಯುವ ಸಮಯದೊಳಗೆ ಗಾಂಧಿ ಭಾವಚಿತ್ರದಡಿಯಲ್ಲಿ ಶ್ರೀ ಜಯಚಾಮರಾಜ ಒಡೆಯರ್‌ರವರ ಚಿತ್ರ ಸಹ ಬರೆದು ಜೈಲರ್‌ನಿಂದಲೇ ಪ್ರಶಂಸೆಗೆ ಪಾತ್ರವಾದದ್ದು ಗುರು ಅವರ ಜೀವನದ ಮರೆಯಲಾಗದ ಘಟನೆ. ಅಲ್ಲಿನ ಊಟ ಸರಿಯಾಗಿಲ್ಲದಿದ್ದಾಗ ಬಂಧಿತ ವಿದ್ಯಾರ್ಥಿಗಳೆಲ್ಲರೂ ಕೂಡಿ ಹೇಳುತ್ತಿದ್ದ ಕಿರುಕವನ ಅಥವಾ ಪದ ಹೀಗೆದೆ.

ಹನುಮಂತರಾಯ, ಬಿ.ಟಿ. ರಾಮಯ್ಯನ ಬಂಟ
ಮೈಸೂರು ಜೈಲೇ ವೈಕುಂಠ
ಅನ್ನ ತಿಂದವ್ರಗೆ ಬಲು ಸಂಕಟ

ರಾಮಯ್ಯನೆಂಬ ಹೋಟೇಲ್ ಉದ್ಯಮಿ ಜೈಲಿನಲ್ಲಿದ್ದವರಿಗೆ ಊಟ ಒದಗಿಸುವ ಗುತ್ತಿಗೆ ಪಡೆದಿದ್ದು ಆತನ ಪ್ರತಿನಿಧಿಯಾಗಿ ಹನುಮಂತರಾಯ ಎಂಬುವರಿದ್ದುದರಿಂದ ಈ ತೆರನ ಪ್ರತಿಭಟನೆ ವ್ಯಕ್ತವಾಗುತ್ತಿತ್ತು.

ಬ್ರಿಟಿಷ್ ಆಳರಸರನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಅಲ್ಲಲ್ಲಿ ಅಶಾಂತಿಯುನ್ನುಂಟು ಮಾಡಲಿಕ್ಕಾಗಿ ನಾಡಬಾಂಬ್ ಸ್ಪೋಟಿಸುವುದು. ಆಡಳಿತಾತ್ಮಕವಾದ ಬಿಕ್ಕಟ್ಟು ಉಂಟುಮಾಡುವುದು ಗುರು ಮತ್ತವರ ಸ್ನೇಹಿತರ ಕೆಲಸವಾಗಿತ್ತು. ಜೊತೆಗೆ ಎಸ್.ಸಿ. ದಾಸಪ್ಪ ಅಗರಂ ರಂಗಯ್ಯ ಮುಂತಾದವರ ಭಾಷಣಗಳಿಗೆ ಜನ ಸೇರಿಸುವುದು, ಕರಪತ್ರಗಳನ್ನು ಹಂಚುವುದು. ನಾಯಕರ ಬರುವಿಕೆ ಹೋಗುವಿಕೆ ಬಗ್ಗೆ ಸುದ್ದಿ ಮುಟ್ಟಿಸುವ ಕೆಲಸ ಮಾಡುತ್ತಿದ್ದರು. ಪೊಲೀಸರ ಕೈಗೆ ಸಿಕ್ಕಿಕೊಂಡಾಗಲೆಲ್ಲಾ ಬಗಲಲ್ಲಿ ಇಟ್ಟುಕೊಂಡು ಸದಾ ರೇಖಿಸಿಕೊಳ್ಳುತ್ತಿದ್ದ ಪುಸ್ತಕವನ್ನು (Sketch Book) ತೋರಿ ನಾನು ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ವಿದ್ಯಾರ್ಥಿ, ನನ್ನ ದಿನಚರಿ ಹಾಜರಿ ಪುಸ್ತಕ ನೋಡಿ (Attendence Book) ನಾನು ಶಾಲೆಗೆ ನಿತ್ಯವೂ ಹಾಜರಾಗುತ್ತೇನೆ. ಬಿಡುವಿದ್ದಾಗಲೆಲ್ಲಾ ಅಭ್ಯಾಸ ಮಾಡುತ್ತೇನೆ. ನನಗೂ ಚಳವಳಿಗೂ ಸಂಬಂಧವಿಲ್ಲವೆಂದು ಸುಳ್ಳು ಹೇಳಿ ತಪ್ಪಿಸಿಕೊಳ್ಳುತ್ತಿದ್ದರಂತೆ. ಒಂದು ವೇಳೆ ಆ ಪೊಲೀಸ್ ಕಲೆ ಬಗ್ಗೆ ಆಸಕ್ತಿ ತೋರಿದರಂತೂ ಅವರನ್ನೇ ನಿಲ್ಲಿಸಿಕೊಂಡು ಕೆಲವೇ ನಿಮಿಷಗಳಲ್ಲಿ ಮುಖಚಿತ್ರ ಬರೆದು ಅವರಿಂದಲೇ ಮಸಾಲೆದೋಸೆಗೆ ಆಗುವಷ್ಟು ಹಣ ಪಡೆದುದನ್ನು ಸ್ಮರಿಸುತ್ತಾರೆ. ಆದರೇ ಕೆಲವು ಪೊಲೀಸರು ಈ ಸ್ಕೆಚ್ ಪುಸ್ತಕ ಇದೆಲ್ಲಾ ನಿನ್ನ ಹತ್ರನೇ ಇಟ್ಟುಕೋ ನೀನು ಏನು ಮಾಡುವೆ ಎಂದು ನನಗೆ ಗೊತ್ತಿದೆಯೆಂದು ಚೆನ್ನಾಗಿ ವದೆ ಕೊಟ್ಟದ್ದು, ತಡೆಯಲಾರದೇ ತೊಟ್ಟಿದ್ದ ನಿಕ್ಕರ್ ಒದ್ದೆಯಾದದ್ದು ಇವೆಲ್ಲಾ ಗತಕಾಲದ ಒಂದು ನೆನಪು ಅನ್ನುತ್ತಾರೆ. ಒಟ್ಟಾರೇ ಅವರ ಅನುಭವಗಳನ್ನು ಕೇಳಿದಾಗ ಮುಂಚೂಣಿ ನಾಯಕನಾಗಿ ಕೆಲಸ ಮಾಡದಿದ್ದರೂ ಗುಪ್ತವಾದ ಕೆಲಸವನ್ನು (Under ground work) ಸಾಕಷ್ಟು ಮಾಡಿದ್ದೇನೆಂದು ಹೆಮ್ಮೆಯಿದೆ ನನ್ನ ಆತ್ಮಕ್ಕೆ ತೃಪ್ತಿಯಿದೆ. ಅರ್ಹತಾ ಪತ್ರ, ಪ್ರಶಂಸಾಪತ್ರ ಇದೆಲ್ಲಾ ದಾಖಲೆಗೆ ಮಾತ್ರ, ಇವೆಲ್ಲಕ್ಕಿಂತ ಮಿಗಿಲಾದ ದಾಖಲೆ ನನ್ನ ಅಂತರಾಳದಲ್ಲಿದೆ. ಎನ್ನುವಲ್ಲಿ ಆ ಕಾಲದ ಸ್ವಾತಂತ್ರ್ಯಯೋಧರು ಎಷ್ಟು ನಿಸ್ವಾರ್ಥ ಭಾವನೆಯಿಂದ ಸೇವೆ ಮಾಡುತ್ತಿದ್ದರು. ಅದರ ಪ್ರತಿಫಲವನ್ನು ಅನುಭವಿಸುತ್ತಿರುವ ಇಂದಿನ ಪೀಳಿಗೆ ಅದೆಷ್ಟು ಸ್ವಾರ್ಥ ಪರರಾಗಿದ್ದಾರೆ. ರಾಜಕೀಯ ಎಂಬುದು ಹೇಳಲಾರದಷ್ಟು ಹೊಲಸಾಗಿದೆ ಎಂಬುದನ್ನು ದೈನಂದಿನ ಪತ್ರಿಕೆಗಳಲ್ಲಿ ನಿತ್ಯವೂ ಕಾಣಬಹುದಾಗಿದೆ. ಇದರ ಬಗ್ಗೆ ಮಾತ ನಾಡದಿರುವುದೇ ಒಳ್ಳೆಯದೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತ ಸ್ವಾತಂತ್ರ್ಯಾನಂತರ ಮತ್ತೊಂದು ಚಳುವಳಿ ನಡೆಯಿತೆನ್ನುತ್ತಾರೆ. ಅದು ಮೈಸೂರು ಒಡೆಯರ ಆಳ್ವಿಕೆ ಅಂತ್ಯವಾಗಲಿ ಎಂಬ ಕೂಗು. **'ಭಾರತ ಒಂದೇ'** ರಾಜರ ಆಳ್ವಿಕೆ ಬೇಡವೇ ಬೇಡ, ಎಂಬ



ಧ್ವನಿ ಎಲ್ಲೆಡೆ ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ಜನಾಂಗೀಯ ದ್ವೇಷ, ಮತ್ತು ರಾಜರ ಆಳ್ವಿಕೆ ಜೀವಂತವಾಗಿರಿಸಿ ಹೋಗಿದ್ದರು. ತತ್ಫಲವಾಗಿ ಮೈಸೂರಿನಲ್ಲಿ ನಡೆದ ಹೋರಾಟದಲ್ಲಿ ಜೈಲು ಅನುಭವಿಸಬೇಕಾಯಿತು. ತದನಂತರದಲ್ಲಿ ನನ್ನ ಸಂಪೂರ್ಣ ಗಮನ ಚಿತ್ರಕಲೆಯತ್ತ ಹೊರಳಿತೆಂದು ತಿಳಿಸುತ್ತಾರೆ.

ಕಲಾಭ್ಯಾಸ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳುವಿಕೆ ಎರಡನ್ನು ಓತಪ್ರೋತವಾಗಿ ನಡೆಸಿಕೊಂಡು ಬಂದ ಗುರು ಅವರು ಕಲಾ ಡಿಪ್ಲೊಮಾವನ್ನು ಮೊದಲನೆ ದರ್ಜೆಯಲ್ಲಿ ಉತ್ತೀರ್ಣಗೊಳಿಸಿಕೊಂಡಿದ್ದು ಒಂದು ಸಾಹಸವೇ ಸರಿ (೧೯೪೪). ಇವರ ದ್ವಿಮುಖ ಸಾಧನೆಯನ್ನು ಗುರುತಿಸಿದ್ದ ಮುಖ್ಯಸ್ಥರಾದ ಎನ್.ಜಿ. ಪಾವಂಜೆಯವರು ತಮ್ಮ ಕೊಠಡಿಗೆ ಕರೆಸಿ ಕುಳಿತುಕೊಳ್ಳಲು ಹೇಳಿದರೂ ನಿಂತೇ ಇದ್ದುದನ್ನು ಕಂಡು ನಿಜವಾಗಲೂ ನೀನು ನಮ್ಮ ಕಲಾಶಾಲೆಗೆ ಒಳ್ಳೆಯ ಹೆಸರನ್ನು ತಂದಿರುವೆ. ಸುಮಾರು ೧೫೦ ವಿದ್ಯಾರ್ಥಿಗಳಿರುವ ಈ ಶಾಲೆಯಲ್ಲಿ ಸಕ್ರೀಯವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿರುವವನು ನೀನೊಬ್ಬನೆ ಎಂದು ಪ್ರಶಂಸೆಯ ನುಡಿಗಳನ್ನಾಡುತ್ತಿದ್ದಂತೆ ಗುರು ಅವರ ಕಣ್ಣಲ್ಲಿ ನೀರು ಅವರಿಗರಿವಿಲ್ಲದಂತೆಯೇ ಬಂದಿತ್ತಂತೆ. ಪಾವಂಜೆಯವರು ಹಾಗೆ ಮಾತು ಮುಂದುವರಿಸಿ ನೀನು ರೂಪಶಿಲ್ಪ ತರಬೇತಿಗೆ ಸೇರಿಕೊ (Modeling course) ಸಾಧ್ಯವಾದ ಎಲ್ಲಾ ನೆರವನ್ನು ನೀಡುತ್ತೇನೆ. ಎನ್ನುತ್ತಾ ಎರಡು ವರ್ಷದ ರಿಯಾಯಿತಿ ನೀಡಿ ಮೂರನೇ ವರ್ಷಕ್ಕೆ ಪ್ರವೇಶಾವಕಾಶ ಮಾಡಿಕೊಟ್ಟರಂತೆ.

ಮಾಡಲಿಂಗ್‌ನ್ನು ಬಹುತೇಕ ಮಣ್ಣಿನಲ್ಲೇ ಮಾಡುತ್ತಿದ್ದುದರಿಂದ ಮೊದಲು ಮಣ್ಣನ್ನು ಹದಗೊಳಿಸಿಕೊಳ್ಳುವ ಕ್ರಮದಿಂದ ಪ್ರಾರಂಭಿಸಿ ಹಲವು ವಿಧ ಹೂಬಳ್ಳಿ, ಆನೆ ಕುದುರೆ ಸಾಲು, ಮಕರವ್ಯಾಳಿ ಮುಂತಾದವನ್ನು ಹಲಗೆ ಮೇಲೆ ಮಣ್ಣಿನಲ್ಲಿ ಆಳದ ಕಲ್ಪನೆ ಬರುವಂತೆ ಮಾಡುವ ವಿಧಾನ. ಯಾವುದಾದರೊಂದು ಮಾದರಿ ಕೊಟ್ಟು ಅದರಂತೆ ಮರು ಸೃಷ್ಟಿಸುವ ವಿಧಾನ ನಂತರದಲ್ಲಿ ವ್ಯಕ್ತಿಯನ್ನು ಕೂರಿಸಿಕೊಂಡು ಅವನಂತೆ ತದ್ರೂಪ ತರುವ ತರಬೇತಿ, ಪೂರ್ಣ ಸ್ವರೂಪದ ದೇಹವನ್ನು ವಿವಿಧ ಆಕಾರ ಮತ್ತು ನೆಲೆಯಲ್ಲಿ ಸೃಷ್ಟಿಸುವ ಹಾಗೂ ಅದನ್ನು ಗಟ್ಟಿಗೊಳಿಸುವ ಕ್ರಮ ಸೇರಿದಂತೆ ಹಲವು ವಿಧದಲ್ಲಿ ಮಣ್ಣಿನ ಮೂರ್ತಿಯ ಕೆಲಸದ ತರಬೇತಿಯನ್ನು ವೇಲಾಯುಧಚಾರ್ ಅವರಿಂದ ಕಲಿಯುತ್ತಾರೆ.

ಉದ್ಯೋಗಕ್ಕೆ ದಾರಿ

ಮಾಡಲಿಂಗ್ ಶಿಕ್ಷಣ ಮುಗಿದ ಮರುವರ್ಷವೇ ಬದನಾಳ್ ಖಾದಿ

ಗ್ರಾಮೋದ್ಯೋಗ ಕೇಂದ್ರದಲ್ಲಿ ವಿನ್ಯಾಸಕಾರನಾಗಿ (Designer) ಸೇರಲಿಚ್ಛಿಸುವವರಿಗೆ ಅವಕಾಶವಿದೆಯೆಂದು ಆ ಇಲಾಖೆ ತಿಳಿಸಿದುದರ ಅನ್ವಯ ಪಾವಂಜೆಯವರು ಗುರು ಅವರನ್ನು ಕರೆದು ಮುಂದೆ ನಿನ್ನ ಜೀವನ ನಿರ್ವಹಣೆಗೆ ದಾರಿಯಾಗುತ್ತದೆ ಹೋಗಿ ಸೇರಿಕೊ ಜೊತೆಗೆ ನಿನ್ನ ಸಹಪಾಠಿ ಕಲಾವಿದರಿದ್ದರೇ ಕರೆದುಕೊಂಡು ಹೋಗು. ನಾನು ಶಿಫಾರಸ್ಸು ಮಾಡುತ್ತೇನೆಂದು ಹೇಳಿ ಉದ್ಯೋಗಕ್ಕೆ ದಾರಿ ಮಾಡುವ ಮೂಲಕ ಜೀವನದ ಮತ್ತೊಂದು ಮಜಲು ಆರಂಭವಾಯಿತು ಎನ್ನುತ್ತಾರೆ. ಬದನಾಳು ನಂಜನಗೂಡಿನಿಂದ ಸುಮಾರು ೧೦ ಕಿ.ಮೀಟರ್ ದೂರದಲ್ಲಿದ್ದು ಅಲ್ಲಿ ಕೈಮಗ್ಗದ ಮೂಲಕ ಸೀರೆ ನೇಯ್ಗೆ, ಹೊದಿಕೆಯ ರಗ್ಗುಗಳು, ಟವಲ್ ಇತ್ಯಾದಿ ತಯಾರು ಮಾಡುವ ಕೇಂದ್ರವಾಗಿದ್ದು ಸುಮಾರು ೨೫ ಜನಕ್ಕಿಂತ ಹೆಚ್ಚಿನ ಉದ್ಯೋಗಸ್ಥರು ಅಧಿಕಾರಿಗಳಿದ್ದು ಗುರು ಅವರನ್ನು ಡಿಸೈನರ್ ಮತ್ತು ಬ್ಲಾಕ್‌ಮೇಕರ್ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿತ್ತು. ಬಟ್ಟೆಗೆ ವಿವಿಧ ರೀತಿಯ ಬಣ್ಣ ಕೂಡಿಸುವಿಕೆ ಮತ್ತು ಹಲವು ನಮೂನೆ ಚಿತ್ತಾರಗಳನ್ನು ಮುದ್ರಿಸುವ (ಡೈಯಿಂಗ್ ಅಂಡ್ ಪ್ರಿಂಟಿಂಗ್) ಮತ್ತು ವಿವಿಧ ಚಿತ್ತಾರಗಳನ್ನು ಮರದಲ್ಲಿ ಮುದ್ರಣಕ್ಕನುಕೂಲವಾಗುವಂತೆ ಕೆತ್ತುವ (Block Making) ವಿಧಾನವನ್ನು ಪ್ರಥಮವಾಗಿ ಕಲಿತ ನಂತರ ಉತ್ಪನ್ನಕ್ಕೆ ಸಹಾಯಕವಾಗುತ್ತಾರೆ.

ಇದೊಂದು ಬಗೆಯ ವಾಣಿಜ್ಯ ಕಲೆಯಾಗಿದ್ದು ಕೈಗೆಲಸಕ್ಕೆ ಮಹತ್ವ ಒಂದೊಂದು ಬಣ್ಣದ ಚಿತ್ತಾರಕ್ಕೂ ಒಂದೊಂದು ಅಚ್ಚನ್ನು ಮಾಡಿಕೊಂಡು ಒಂದರ ಮೇಲೆ ಒಂದು ಬಾರದಂತೆ ಎಚ್ಚರ ವಹಿಸಿ ಅಚ್ಚನ್ನು ಸಿದ್ಧಪಡಿಸುವುದು ಬಹಳ ಮುಖ್ಯ. ಅನ್ವೇಷಣೆ ಮತ್ತು ಅಭಿವೃದ್ಧಿಪಡಿಸುವುದು ಎಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೋ ಅಲ್ಲಿನ ಉತ್ಪಾದನ ಮಾರುಕಟ್ಟೆ ಹುಲುಸಾಗಿ ಬೆಳೆಯುತ್ತದೆ. ಇದನ್ನೇ ಆಂಗ್ಲಭಾಷೆಯಲ್ಲಿ (Research and development) ಎಂದು ಕರೆಯುತ್ತಾರೆ. ಬೃಹತ್ ಕಾರ್ಖಾನೆಗಳು ಇದಕ್ಕಾಗಿಯೇ ಪ್ರತ್ಯೇಕ ಘಟಕ ಮಾಡಿ ತಜ್ಞರನ್ನೇ ನೇಮಕ ಮಾಡಿಕೊಳ್ಳುತ್ತಾರೆ. ಆದರೇ ಆಗಿನ್ನು ಇಂತಹ ಪದ ಬಳಕೆಯು ಸಹ ಇಲ್ಲದಿದ್ದುದರಿಂದ ಅನುಭವಿ ವ್ಯಕ್ತಿಯ ನಿರ್ದೇಶನದಂತೆ ನಡೆಯುತ್ತಿದ್ದವು. ಈ ವ್ಯವಹಾರಿಕ ಧರ್ಮವನ್ನರಿತ್ತಿದ್ದ ಗುರು ಅವರು ಸಾಧ್ಯವಾದಷ್ಟು ಅಲ್ಲಿನ ಲಭ್ಯ ಸಂಪನ್ಮೂಲಗಳ ಬಳಕೆ ಮಾಡಿಕೊಂಡು ಆಕರ್ಷಕ ವಿನ್ಯಾಸಗಳನ್ನು ಮಾಡಿ ಅಚ್ಚನ್ನು ತಯಾರಿಸಿ ಮುದ್ರಣಕ್ಕೆ ಅನುವು ಮಾಡಿಕೊಡುತ್ತಾರೆ. ಸುಮಾರು ಎರಡು ವರ್ಷ (೧೯೪೬-೪೮) ಕೆಲಸ ಮಾಡಿದ ಇವರು ತಮ್ಮ ನಿತ್ಯ ಜೀವನದ ಎರಡು ಕೆಲಸಗಳಾದ ಕ್ಷಿಪ್ರರೇಖಾ ಚಿತ್ರರಚನೆ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಭೂಗತ ಕಾರ್ಯಾಚರಣೆಗಳನ್ನು ನಿಲ್ಲಿಸದೇ ಮಾಡುತ್ತಿದ್ದುದನ್ನು ಕಂಡ ಪಾವಂಜೆಯವರು ನಮ್ಮ ಚಾಮರಾಜೇಂದ್ರ




ವೃತ್ತಿ ಶಿಕ್ಷಣ ಶಾಲೆಯಲ್ಲಿ ವುಡ್ ಕಟಿಂಗ್ ಮತ್ತು ಬ್ಲಾಕ್ ಮೇಕಿಂಗ್ ವಿಭಾಗವನ್ನು ಹೊಸದಾಗಿ ತೆರೆಯುವ ಆಲೋಚನೆ ಇದೆ ಇಲ್ಲಿಗೆ ಬಂದುಬಿಡು ಶಿಕ್ಷಕನಾಗಿ ಎಂದು ಒತ್ತಾಯಿಸಿದುದನ್ನು ನೆನಸಿಕೊಳ್ಳುತ್ತಾ ಉಪೇಕ್ಷೆ ಮಾಡದೇ ಹೋಗಿದ್ದರೇ ಈ ಅಲೆಮಾರಿತನ ತಪ್ಪುತ್ತಿತ್ತೋ ಏನೋ! ಎಂದು ನನಗೆ ಈಗ ಅನ್ನಿಸುತ್ತದೆ ಎಂದು ಮಾರ್ಮಿಕವಾಗಿ ನುಡಿಯುತ್ತಾರೆ.

ಸ್ಟುಡಿಯೋ ಕಲಾನುಭವ

ಖಾದಿ ಸೆಂಟರ್‌ನಲ್ಲಿ ಕೊಡುತ್ತಿದ್ದ ಮಾಸಿಕ ವೇತನ ನಲವತ್ತೈದು ರೂ.ಗಳಾಗಿದ್ದು ಜೀವನ ನಿರ್ವಹಣೆಗೆ ತೊಂದರೆ ಆಗುತ್ತಿದ್ದುದರಿಂದ ಪರ್ಯಾಯವಾದ ಕೆಲಸದ ಚಿಂತನೆ ನಡೆಸುತ್ತಿದ್ದಾಗ ಗುರು ಅವರ ಆಪ್ತರು. ಹಿತೈಷಿಯು ಆದ ಗುರುನಂಜಯ್ಯ ಅನ್ನುವವರ ಮೂಲಕ ನವಜ್ಯೋತಿ ಸ್ಟುಡಿಯೋದಲ್ಲಿ ಕಲಾವಿದನಾಗಿ ಸೇರ್ಪಡೆಯಾಯಿತು. ಕಲೆಯಲ್ಲಿ ಹೆಚ್ಚಿನ ವಿಷಯ ತಿಳಿದುಕೊಳ್ಳಬೇಕು ಎಂಬ ಹಂಬಲದಿಂದಲೇ ಸೇರಿದ ಗುರು ಅವರಿಗೆ ಒಳ್ಳೆಯ ಸ್ವಾಗತವು ದೊರೆಯಿತು. ಕರ್ನಾಟಕದ ಮೊದಲ ಸ್ಟುಡಿಯೋ ಆದ ನವಜ್ಯೋತಿಯ ೯ ಜನ ನಿರ್ದೇಶಕರ ಪೈಕಿ ಒಬ್ಬರಾದ ಕಲಾ ನಿರ್ದೇಶಕ ಎಂಬಾರಯ್ಯ ಅವರ ಪರಿಚಯವಾಯಿತು. ಚಿತ್ರ ನಿರ್ಮಾಣವೇ ಪ್ರಮುಖ ಗುರಿಯಾದುದರಿಂದ ರಸ್ತೆದೃಶ್ಯ, ರಂಗುರಂಗಿನ ಮಹಲ್, ಸೆರೆಮನೆ, ಅರಮನೆ, ಉದ್ಯಾನವನ, ಬಂಗಲೇ, ಗುಡಿಸಲು, ಕೈಲಾಸ, ವೈಕುಂಠ ಚಲನಚಿತ್ರಕ್ಕೆ ಸಂಬಂಧಿಸಿದ ಇಂತಹದು ಯಾವುದೇ ಇರಲಿ ಅದನ್ನು ಸಾಧ್ಯವಾದಷ್ಟು ಸ್ಟುಡಿಯೋ ಒಳಗೆ, ಅಥವಾ ಹೊರ ಆವರಣದಲ್ಲಿ ನಿರ್ಮಾಣ ಮಾಡಿ ಅಲ್ಲಿಯೇ ಚಿತ್ರೀಕರಿಸಿಕೊಳ್ಳುವ (ಸೂಟಿಂಗ್) ಕೆಲಸವಾಗುತ್ತಿತ್ತು. ಮರಗೆಲಸ (Wood Work) ಮತ್ತು ಚಿತ್ರಗೆಲಸ (Painting) ಹೆಚ್ಚಿನ ಪ್ರಮಾಣದಲ್ಲಿದ್ದು ಚಲನಚಿತ್ರದ ನಿರ್ದೇಶಕನ ಆಣತಿಯಂತೆ ಕಲಾ ನಿರ್ದೇಶಕ ಕೆಲಸ ಮಾಡಬೇಕು. ಆಗ್ಗೆ ಈಗಿನ ಹಾಗೆ ಹೆಚ್ಚಿನ ಹೊರಾಂಗಣ ಚಿತ್ರೀಕರಣವಿರುತ್ತಿರಲಿಲ್ಲ. (Out door shooting) ಎಲ್ಲವೂ ಒಳಾಂಗಣವೇ. ಇಷ್ಟು ಹೊತ್ತಿಗೆ ಕಾಲ್‌ಷೀಟ್ ಇದೆ ಎಂದರೇ ಆ ವೇಳೆಗೆ ಸಕಲ ಸಿದ್ಧತೆಗಳು ಆಗಬೇಕಾಗಿರುವುದರಿಂದ ರಾತ್ರಿ ಹಗಲು ಕೆಲಸ ಮಾಡಬೇಕಾದುದು ಅನಿವಾರ್ಯ. ನಿಯಮಿತವಾದ ಸಮಯಕ್ಕೆ ಊಟ, ನಿದ್ದೆ ಎಂದು ಪರಿಭಾವಿಸುವಂತಿಲ್ಲ. ಇವೆಲ್ಲವೂ ಗುರು ಅವರಿಗೆ ಹೊಸದೆನಿಸಿದರೂ ಸ್ಪರ್ಧಾತ್ಮಕವಾಗಿ ಸ್ವೀಕರಿಸಿ ನಿತ್ಯವೂ ವಾಸವಾಗಿದ್ದ ನಂಜನಗೂಡಿನಿಂದ ಬಂದು ಕೆಲಸ ಮಾಡುತ್ತಿದ್ದರು.

ಕಲಾ ನಿರ್ದೇಶಕರು ಸೇರಿದಂತೆ ಅವರ ಸಹ ಕಲಾವಿದರುಗಳು ಯಾವುದೇ ಕಲಾ ಶಾಲೆಗಳಲ್ಲಿ ನಿಯಮಿತವಾಗಿ ಕಲಿತವರಾಗದೇ ಹಿರಿಯ ಕಲಾವಿದರಿಗೆ ಸಹಾಯಕರಾಗಿ ಕೆಲಸ ಮಾಡುತ್ತಲೇ ಕಾರ್ಯಾನುಭವ (Work experience) ಪಡೆದುಕೊಂಡು ಮುಂದೆ ಅವರೇ ಕಲಾ ನಿರ್ದೇಶಕರಾಗುತ್ತಿದ್ದರು. ಓದಿನ ಅನುಭವ ಗೌಣವಾದುದರಿಂದ ಚಿತ್ರರಚನೆಯಲ್ಲಿ ಕೆಲವು ವ್ಯತ್ಯಾಸಗಳು ಆಗುತ್ತಿದ್ದುದು ಉಂಟು. ಒಮ್ಮೆ ತಯಾರಿಸುತ್ತಿದ್ದ ಚಲನಚಿತ್ರಕ್ಕನುಗುಣವಾಗಿ ಆಂಜನೇಯ ಪರ್ವತವನ್ನೇ ಹೊತ್ತು ಆಕಾಶ ಮಾರ್ಗವಾಗಿ ಸಾಗುವ ಸನ್ನಿವೇಶವನ್ನು ಪರದೆ ಮೇಲೆ ಇಡೀ ರಾತ್ರಿ ಶ್ರಮವಹಿಸಿ ಇತರ ಕಲಾವಿದರು ಬರೆದಿರುತ್ತಾರೆ. ಬರೆದ ಚಿತ್ರ ಸನ್ನಿವೇಷಕ್ಕೆ ಕಲಾ ನಿರ್ದೇಶಕರ ಅನುಮೋದನೆಯು ದೊರೆತಿರುತ್ತದೆ.



ಬೆಳಗ್ಗೆ ಚಿತ್ರೀಕರಣವಾಗಬೇಕು. (Shooting) ರಾತ್ರಿಯೆಲ್ಲಾ ಕೆಲಸ ಮಾಡಿದ ಅವರುಗಳು ಸಹಜವಾಗಿ ನಿದ್ರೆಗೆ ಶರಣಾಗಿದ್ದರು. ಬೆಳಗ್ಗೆ ಸ್ಟುಡಿಯೋಗೆ ಬಂದ ಗುರು ಅವರು ನೋಡುತ್ತಾರೆ. ಆಂಜನೇಯನ ಬಾಹುಗಳು ಅಸಹಜವಾಗಿದ್ದು ಅವಶ್ಯಕತೆಗಿಂತ ಕೆಲವು ಕಡೆ ದಪ್ಪವಾಗಿದ್ದರೇ ಕೆಲವು ಕಡೆ ತೀರಾ ಕೃಶವಾಗಿರುತ್ತದೆ. ಇನ್ನೇನು ಚಿತ್ರೀಕರಣ ಆರಂಭವಾಗುತ್ತದೆಯಾದ್ದರಿಂದ ಈ ವ್ಯತ್ಯಯವನ್ನು ಸರಿಪಡಿಸುವುದು ಉತ್ತಮವೆಂದು ಭಾವಿಸಿ ತಿದ್ದಿ ಸೂಕ್ತವಾದ ರೂಪ ಕೊಡುತ್ತಾರೆ. ಆಗತಾನೇ ಬಂದ ಆ ಚಲನಚಿತ್ರದ ನಿರ್ದೇಶಕ ಕೆಂಪರಾಜೇ ಅರಸ ಅವರಿಗೆ ತಾವು ಬದಲಿಸಿ ಬರೆದುದನ್ನು ತಿಳಿಸಿ, ಒಂದು ವೇಳೆ ಹಾಗೆ ಬಿಟ್ಟಿದ್ದರೇ ಚಿತ್ರೀಕರಣವಾದ ನಂತರ ಎಂತಹ ಅಭಾಸವಾಗಿ ಕಾಣುತ್ತಿತ್ತು ಎಂಬುದಾಗಿ ವಿವರಿಸಿದಾಗ ಎಲ್ಲಾ ಕಲಾವಿದರಿಗೆ ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಂಡ ಪರಿಣಾಮ ಗುರು ಅವರ ಮೇಲೆ ಎಲ್ಲರ ಕೆಂಗಣ್ಣು ಬೀಳುತ್ತದೆ. ಅಂದಿನಿಂದಲೇ ಸ್ಟುಡಿಯೋನಿಂದ ಹೊರಕ್ಕೆ ಕಳಿಸಬೇಕೆಂಬ ಯತ್ನ ಆರಂಭವಾಗುತ್ತದೆ. ಕಲೆಯನ್ನು ಕಲಿಯಬೇಕೆಂಬ ದೃಷ್ಟಿಯಿಂದ ಬಂದುದರಿಂದ ಗುರು ಅವರು ಎಲ್ಲವನ್ನು ಸಮಚಿತ್ತವಾಗಿ ಸ್ವೀಕರಿಸುತ್ತಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿ ದುಮುಕಿ ಅನುಭವಿಸಿದ ಯಾತನೆಗಿಂತ ಇದು ದೊಡ್ಡದಲ್ಲ ಎಂಬ ಭಾವನೆ ಅವರದಾಗಿರುತ್ತದೆ.

ಸಾಮಾನ್ಯವಾಗಿ ಅನ್ಯ ಭಾಷಿಕರೇ ಕಲಾವಿದರಾಗಿದ್ದು ಚಲನಚಿತ್ರ ಕ್ಷೇತ್ರವನ್ನೇ ಹೆಚ್ಚಾಗಿ ಅವಲಂಭಿಸಿದುರಿಂದ ಸಂಘಟನೆಯಾಗುತ್ತಿದ್ದುದು ಸಾದಾರಣ ವಿಷಯವಾಗಿತ್ತು. ಸ್ಥಳೀಯವಾಗಿ ಸೇರ್ಪಡೆಯಾದವರಿಗೆ ಅದರ

ಬಿಸಿ ತಟ್ಟುತ್ತಿತ್ತು. ಇದೇ ಅನುಭವವನ್ನು ಈ ಪುಸ್ತಕದ ಲೇಖಕನಾದ ನಾನು ಸಹ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ಖ್ಯಾತ ನಿರ್ದೇಶಕ ಜಿ.ವಿ. ಅಯ್ಯರ್‌ರವರ ಪೋಸ್ಟ್ ಮಾಸ್ಟರ್ ಚಲನಚಿತ್ರ ನಿರ್ಮಾಣದಲ್ಲಿ ಹಾಗೂ ಮತ್ತೊರ್ವ ಉತ್ತಮ ನಿರ್ದೇಶಕ, ಚಿತ್ರ ಸಾಹಿತಿ ಕಣಗಾಲ್ ಪ್ರಭಾಕರ ಶಾಸ್ತ್ರೀಯವರ ಸುಭದ್ರ ಕಲ್ಯಾಣ ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಚಿತ್ರೀಕರಣವಾದಾಗ ಸಹ ಕಲಾವಿದನಾಗಿ (Painter) ಕೆಲಸ ಮಾಡುತ್ತಿದ್ದಾಗ ನಡೆದ ಘಟನೆಗಳು ಸಾಕಷ್ಟು ನೆನಪಿಗೆ ಬರುತ್ತದೆ. ಹಾಗೆಯೇ ಮೈಸೂರಿನ ಕಲಾನಿಕೇತನದ (School of Art) ಸ್ಥಾಪಕರಾದ ದಿ॥ ಕಾಳಪ್ಪನವರು ಸಹ ಕೆಲವು ತಿಂಗಳುಗಳು ಮಾತ್ರ ನವ್ಯ-ಜ್ಯೋತಿ ಸ್ಟುಡಿಯೋದಲ್ಲಿ ಕಲಾವಿದರಾಗಿ ಕಾರ್ಯ ನಿರ್ವಹಿಸುತ್ತಿದ್ದುದು. ಅನಂತರ ಅಲ್ಲಿನ ವಾತಾವರಣ ಒಗ್ಗದೇ ಬಿಟ್ಟು ಬಂದ ವಿಚಾರಗಳು ಅವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ.

ಗುರು ಅವರ ದೃಷ್ಟಿಯಲ್ಲಿ ಸ್ಟುಡಿಯೋ ಕೆಲಸ ಅಪಾರ ಅನುಭವ ನೀಡಿತೆನ್ನುತ್ತಾರೆ. ಸಣ್ಣ ಪ್ರಮಾಣದಲ್ಲಿ ಪುಸ್ತಕದ ಅಳತೆಗೆ ಚಿತ್ರ ಬರೆಯುತ್ತಿದ್ದ ನನಗೆ ಆಳೆತ್ತರದ ಮಾನವಾಕೃತಿಯನ್ನು ಆಯಾಯ ಸನ್ನಿವೇಶಕ್ಕೆ ಅನುಗುಣವಾಗಿ ಚಿತ್ರಿಸುವುದು. ದೇವದೇವತೆಗಳು, ಶೃಂಗಾರ ಮಧನಿಕೆಯರು, ಸಸ್ಯಶ್ಯಾಮಲವುಳ್ಳ ವನರಾಶಿ ಕಾಡಿನ ದೃಶ್ಯ ನಲ್ಲ-ನಲ್ಲೆಯರು ನಲಿದಾಡಲು ವಿಧ ವಿಧವಾದ ಹೂಗಳು ಪಲ್ಲೈಸುವ ಉದ್ಯಾನವನ, ವಿರಹತಾಪವನ್ನನುಭವಿಸುವ ಸನ್ನಿವೇಷಕ್ಕೆ ಒಣಗಿದ ಮರ, ಬರಡುಭೂಮಿ, ಹಸಿರಿಲ್ಲದ ಕಾನನ, ನೀರಿಲ್ಲದ ವನ, ಇತ್ಯಾದಿಗಳನ್ನು ಚಿತ್ರದಲ್ಲೇ ತೋರಿಸುವ ವಿಧಾನ. ಪೌರಾಣಿಕ ಚಿತ್ರಗಳನ್ನಾಗಲೀ ಜಾನಪದ ಚಿತ್ರಗಳನ್ನಾಗಲೀ ಚಿತ್ರೀಕರಿಸುವಾಗ ಅಲ್ಲಿ ಬರುವ ಒಂದೊಂದು ಪಾತ್ರವನ್ನು ಜೀವಂತಿಕೆ ತರುವ ಬಗೆ. ಪೇಪರ್ ಮೌಲ್ಡ್‌ನಲ್ಲಿ ಒಂದು ಅಡಿ ಎತ್ತರದಿಂದ ಹತ್ತಾರು ಅಡಿ ಎತ್ತರದವರೆಗೆ ವಿಗ್ರಹ ಮಾಡುವ ವಿಧಾನ. ಗದೆ ಮತ್ತಿತರ ಆಯುಧಗಳನ್ನು ಪೇಪರ್ ಮೌಲ್ಡ್‌ನಿಂದಲೇ ಮಾಡಿ ಬಣ್ಣದ ಕಾಗದ ಅಂಟಿಸುವ ಕ್ರಮ. ಪ್ರತಿಯೊಂದು ಸನ್ನಿವೇಶ, ಚಿತ್ರ ವಿಗ್ರಹ ಎಲ್ಲಕ್ಕೂ ಟೆಂಪರಾ ಬಣ್ಣಗಳನ್ನೇ ಬಳಸುವ ವಿಧಾನ ಹತ್ತಿಪ್ಪತ್ತು ಅಡಿಯ ಪರದೆ ಬರೆಯುವಾಗ ಏಣಿ ಮೇಲೆ ಅಥವಾ ದೊಡ್ಡ ಅಳತೆಯ ಸ್ಟೂಲ್ ಮೇಲೆ ನಿಂತು ಅಗಲವಾದ ಬ್ರಷ್‌ನಿಂದ ಚಿತ್ರ ರಚಿಸುತ್ತಿದ್ದ ಆ ಸನ್ನಿವೇಶ ಹೀಗೆ ಒಂದೇ ಎರಡೇ ನಿಜಕ್ಕೂ ಇದೊಂದು ಚಲನಚಿತ್ರ ಉದ್ಯಮವೇ ಸರಿ. (Film Industry) ಶಾಲಾ ಕಲಿಕೆಗಿಂತ ತೀರಾ ಭಿನ್ನವಾದ ನೆಲೆಯಲ್ಲಿದ್ದ ಈ ಕಲಾ ಕಾರ್ಖಾನೆ (ಸ್ಟುಡಿಯೋ)ಯಲ್ಲಿ ಕೆಲಸ ಮಾಡುವುದು ನನಗೆ ರೋಮಾಂಚನ ತರುತ್ತಿತ್ತು. ಎನ್ನುತ್ತಾ ಆದರೇ ತಿಂಗಳಲ್ಲಿ ಹತ್ತಾರು ದಿನ ಕೆಲಸವಿದ್ದರೇ ಉಳಿದಂತೆ ಖಾಲಿಯೇ. ತುಂಡುಗೆಲಸದ (Piece work) ಆಧಾರದ ಮೇಲೆ ಕೂಲಿ

ದೊರಕುತ್ತಿದುದರಿಂದ ಮನಸ್ಸು ಯಾವುದಾದರೊಂದು ಖಾಯಂ ಕೆಲಸದ ಕಡೆಗೆ ಹಾತೊರೆಯುತ್ತಿದ್ದರಿಂದ ಜೊತೆಗೆ ಅಲ್ಲಿನ ಗುಂಪುಗಾರಿಕೆಯು ಅನ್ಯ ಮಾರ್ಗವನ್ನಿಡಿಯಲು ಪ್ರೇರಕವಾಯಿತೆನ್ನುತ್ತಾರೆ.


ವಾಣಿಜ್ಯ ಕಲಾನುಭವ

ನವಜ್ಯೋತಿ ಸ್ಟುಡಿಯೋದಿಂದ ಹೊರಬಂದ ಗುರು ಅವರು ನಿತ್ಯ ಕಾಂಯುಕವಾದ ಸ್ಕೆಚ್ ಮಾಡುವುದನ್ನು ಹೆಚ್ಚು ಚುರುಕಾಗಿ ಮಾಡಲಾರಂಭಿಸಿದರು.

ಕುಂತ್ರೆ ನಿಂತ್ರೆ ಅದೇ ಧ್ಯಾನ
ಅದಿಲ್ಲದಿದ್ದರೆ ಜೀವಕ್ಕಿಲ್ಲ ಸಮಾಧಾನ

ಎಂಬಂತೆ ಗುರು ಅವರು ಹೆಚ್ಚು ಹೆಚ್ಚಾಗಿ ಜನರಿಗೆ ಸ್ಕೆಚ್ ಮೂಲಕ ಕಾಣಿಸುವಂತಾದರು. ಆಗ್ಗೆ ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಗೆ ಪುಸ್ತಕ ಪ್ರಕಟಣೆಗಳಿಗನುಗುಣವಾದ ಚಿತ್ರ ಬರೆದು ಕೊಡುವವರ ಅವಶ್ಯಕತೆ ತೀವ್ರವಾಗಿತ್ತು. ಅಲ್ಲಿನ ಅಧಿಕಾರಿಗಳ ಗಮನಕ್ಕೆ ಬಂದು ಗುರು ಅವರಿಗೆ ಎನ್. ಭದ್ರಯ್ಯ ಅವರು ಬರೆದ ಆರೋಗ್ಯ ಭಾಗ್ಯ ಎಂಬ ಪಥ್ಯ ಪುಸ್ತಕಕ್ಕೆ ಚಿತ್ರ ಬರೆಯಲು ಆಹ್ವಾನಿಸುತ್ತಾರೆ. ತ್ರಿವರ್ಣದಲ್ಲಿ ಮುಖಪುಟ ಏಕವರ್ಣದಲ್ಲಿ ಒಳಪುಟಗಳ ಚಿತ್ರಗಳನ್ನು ಬಹಳ ಅಚ್ಚುಕಟ್ಟಾಗಿ ಬರೆದುಕೊಟ್ಟರಲ್ಲದೇ ಪುಸ್ತಕದ ಪ್ರತಿ ಪುಟದ ವಿನ್ಯಾಸವನ್ನು ಗಮನಿಸಿ ಸರ್ವಾಂಗೀಣವಾಗಿ ಉತ್ತಮ ಮುದ್ರಣ ಆಗಲು ಶ್ರಮಿಸುತ್ತಾರೆ. ಎಲ್ಲರ ಗಮನ ಸೆಳೆಯುತ್ತದೆ. ಗುರು ಅವರ ಚಿತ್ರಗಳು ಮೊದಲನೆಯದಾಗಿ ಮುದ್ರಣವಾಗುತ್ತದೆ.

ನಂತರದಲ್ಲಿ ಮೀನುಮಸಾನಿಯವರು ಬರೆದ OUR INDIA ಆಂಗ್ಲ ಕೃತಿಯಂತೆ ಎಂ.ಆರ್. ರಾಮಸ್ವಾಮಿಯವರು ಸಹ OUR MYSORE ಎಂಬ ಪುಸ್ತಕ ಬರೆದದ್ದು, ಅದಕ್ಕೆ ಗುರು ಅವರಿಂದಲೇ ಮುಖಪುಟ ಮತ್ತು ಒಳಪುಟದ ಚಿತ್ರಗಳನ್ನು ಮಾಡಿಸಬೇಕೆಂದು ಬಯಸಿ ಹುಡುಕಿಕೊಂಡು ಬಂದು ಕೊಡುತ್ತಾರೆ. ಹೀಗೆ ಮುಂದುವರೆದು ವಯಸ್ಕರ ಶಿಕ್ಷಣ ಸಮಿತಿಯ ಮಾಸಪತ್ರಿಕೆಯಾದ ಪುಸ್ತಕ ಪ್ರಪಂಚ (ಇದು ಇಂಗ್ಲೀಷಿನ Digest ರೀತಿ) ಹಾಗೂ ವಾರಪತ್ರಿಕೆಯಾದ ಬೆಳಕು ಇವುಗಳಿಗೆ ನಿರಂತರ ಬರೆಯುವ ಯೋಗ ಕೂಡಿ ಬರುತ್ತದೆ. ಹೀಗೆ ನಿರಂತರ ಒಂದಾದ ಮೇಲೆ ಒಂದು ಬರೆಯುವ ಅವಕಾಶ ದೊರೆತರೂ ಇವೆಲ್ಲವೂ ತುಂಡುಗೆಲಸವೇ. (Piece Work) ಆಗಿತ್ತು. ಆಗ್ಗೆ ದೊರೆಯುತ್ತಿದುದು ಒಂದು ಸಂದರ್ಭ ಚಿತ್ರಕ್ಕೆ ಎರಡು ರೂ. ಮಾತ್ರ. ಇನ್ನು ಖಾಸಗಿಯಾಗಿ ಮಾಡಿಸಿಕೊಳ್ಳುವವರಂತೂ ಒಂದು ರೂ. ಕೊಡುವುದೇ ಕಷ್ಟ. (ಇಂದಿನ ದಿನಗಳಲ್ಲಿ ಆ ಒಂದೆರಡು ರೂ.ಗಳಿಗೆ ಏನು ಕಿಮ್ಮತ್ತಿದೆ ಚಿಂತಿಸಬೇಕಾದ ವಿಷಯ).



ಆಗ್ಗೆ ಎ.ಸಿ. ದೇವೇಗೌಡರು ವಯಸ್ಕರ ಶಿಕ್ಷಣ ಸಂಸ್ಥೆಯ ಮುಖ್ಯ ಅಧಿಕಾರಿಯಾಗಿದ್ದರು. (Chief officer) ತಮ್ಮ ಇಲಾಖೆಯಿಂದ ಪ್ರಕಟವಾದ ಪುಸ್ತಕಗಳ ಚಿತ್ರಗಳನ್ನು ನೋಡಿ, ಇವರನ್ನೇಕೆ ನಮ್ಮಲ್ಲಿ ಖಾಯಂ ಉದ್ಯೋಗಿಯನ್ನಾಗಿಸಿಕೊಳ್ಳಬಾರದೆಂದು ಮನದಲ್ಲೇ ಲೆಕ್ಕಾಚಾರ ಹಾಕಿ ಗುರು ಅವರನ್ನು ಕೇಳಿದಾಗ ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದು ಹಾಲು ಅನ್ನ ಎಂಬಂತಾಗಿ ಸಾರ್ ನಾನು ತಿಂಗಳೊಪ್ಪತ್ತಿನಲ್ಲಿ ಎಷ್ಟು ಕೆಲಸ ಮಾಡುತ್ತೇನೆಂಬುದು ತಮಗೆ ಗೊತ್ತಿದೆ. ಸಂಬಳವನ್ನು ಸರಿಯಾಗಿ ನಿರ್ಧರಿಸಿ ಎಂದು ಮನವಿ ಮಾಡಿದಾಗ ನಕ್ಕು ನೋಡೋಣ ಮೊದಲು ನಾಳೆಯಿಂದಲೇ ಕೆಲಸಕ್ಕೆ ಬನ್ನಿ ಎಂದವರು ಅಲ್ಲಿ ಪದವಿದರರಾಗಿ ಕೆಲಸ ಮಾಡುತ್ತಿದ್ದವರೆಗೆ ೪೦ ರೂ. ನೀಡುತ್ತಿದ್ದರೇ ಕಲಾವಿದ ಗುರು ಅವರಿಗೆ ೭೫ರೂ.ಗಳನ್ನು ನಿಗದಿಗೊಳಿಸುತ್ತಾರೆ.

ಆಗ್ಗೆ ಇನ್ನೊಂದು ಸಂದರ್ಭದಲ್ಲಿ ಆಂಗ್ಲ ಅಧಿಕಾರಿ ಈಗಲ್‌ಟನ್ ತಮ್ಮ ಇಲಾಖೆಯ ಮಾಹಿತಿ ಪಟಕ್ಕಾಗಿ (Chart) ಚಿತ್ರ ರಚಿಸಲು ಕಲಾವಿದರನ್ನು ಆಹ್ವಾನಿಸಿರುತ್ತಾರೆ. ಕಲಾ ಶಿಕ್ಷಣ ಪಡೆಯುತ್ತಿದ್ದಾಗ ಗುರು ಅವರಿಗಿಂತ ಒಂದು ವರ್ಷ ಮಾತ್ರ ಹಿರಿಯ ವಿದ್ಯಾರ್ಥಿಯಾಗಿದ್ದ ಪಿ.ಆರ್. ತಿಪ್ಪೇಸ್ವಾಮಿಯವರು ಸೇರಿದಂತೆ ಇನ್ನು ಹತ್ತಾರು ಕಲಾವಿದರು ಬಂದಿರುತ್ತಾರೆ. ಅವರೆಲ್ಲರೂ ತಾವು ಬರೆದ ವರ್ಣ ಚಿತ್ರಗಳನ್ನು ತಂದಿದ್ದರೇ, ಗುರು ಅವರು ತಂದಿದ್ದು ಬರೀ ಸ್ಕೆಚ್ ಪುಸ್ತಕ ಮಾತ್ರ, ತೋರಿಸಲಿಕ್ಕೆ ಒಂದು ಬಗೆಯ ಸಂಕೋಚ. ಆದರೂ ಅವರ ಸರದಿ ಬಂದಾಗ ಹೋಗುತ್ತಾರೆ. ಈಗಲ್‌ಟನ್ ಅವರಿಗೆ ಸ್ಕೆಚ್ ಪುಸ್ತಕ ನೋಡಿ ಚಿತ್ರಗಳ ರಚನಾ ಶೈಲಿ ಬಹಳವಾಗಿ ಹಿಡಿಸುತ್ತದೆ. ಮಾಹಿತಿ ಪಟಗಳೆಲ್ಲವನ್ನು ನೀವೇ ಬರೆಯಿರಿ ಎಂದಾಗ ಕ್ಷಣಕಾಲ ತಬ್ಬಿಬ್ಬು. ಇಷ್ಟೊಂದು ಕೆಲಸ ನೀವು ಹೇಳುವ ಸಮಯದಲ್ಲಿ ನಾನೊಬ್ಬನೇ ಮಾಡಲು ಸಾಧ್ಯವಿಲ್ಲವೆಂದಾಗ ಪ್ರಯತ್ನಿಸಿ, ನೀವೇ ನಿಮ್ಮ ಆಪ್ತರಿಗೆ ಕೊಟ್ಟು ಮಾಡಿಸಿ ಈ ಒಟ್ಟು ಕೆಲಸ ನಿಮ್ಮದೇ ಎಂದಾಗ ಅಲ್ಲೇ ಇದ್ದ ತಿಪ್ಪೇಸ್ವಾಮಿಯವರು ನನಗೂ ನಾಲ್ಕಾರು ಕೊಡಿ ಮಾಡುತ್ತೇನೆಂದು ಪಡೆಯುತ್ತಾರೆ. ತದನಂತರದಲ್ಲಿ ಗುರು ಅವರ ವಾಸಸ್ಥಳ ಹುಡುಕಿಕೊಂಡು ಬಂದ ತಿಪ್ಪೇಸ್ವಾಮಿಯವರು ಅವರಿದ್ದಲ್ಲಿಗೆ ಬಣ್ಣ, ಕಾಗದ ಮತ್ತಿತರ ಸಲಕರಣೆಗಳನ್ನು ತಂದು ಗುರು ಅವರಿಗೆ ತೋರಿಸಿ ಮಾಹಿತಿ ಪಟಗಳನ್ನು ಚಿತ್ರಿಸುತ್ತಾರೆ. ಆಗ್ಗೆ ಆರಂಭವಾದ ಸ್ನೇಹ ಆಲದ ಮರದ ಬೇರು ಬಿಟ್ಟಂತೆ ಬೆಳೆದದ್ದು ಒಂದು ಇತಿಹಾಸ.



ವಯಸ್ಕರ ಶಿಕ್ಷಣ ಸಮಿತಿ ವತಿಯಿಂದ ಪ್ರಕಟವಾಗಲಿರುವ ಕುವೆಂಪುರವರ ಜನಪ್ರಿಯ ವಾಲ್ಮೀಕಿ ರಾಮಾಯಣಕ್ಕೆ ಸಂದರ್ಭ ಚಿತ್ರ ರಚಿಸುವಾಗ ಪ್ರತಿವಾರ ಕುವೆಂಪುರವರನ್ನು ಭೇಟಿ ಮಾಡಿ ಆ ಪಾತ್ರ, ಸನ್ನಿವೇಷಗಳ ವಿವರ ಪಡೆದು ಅದನ್ನು ಪ್ರಾರಂಭದಲ್ಲಿ ಸೀಸದಕಡ್ಡಿಯಿಂದ ರೇಖಿಸಿ ನಂತರ ಕಪ್ಪುಶಾಯಿ (Indian Ink) ಯಲ್ಲಿ ಬರೆದು ಪೂರ್ಣಗೊಳಿಸುತ್ತಿದ್ದ ಕ್ರಮವನ್ನು ಗುರು ಅವರು ನೆನೆಸಿಕೊಳ್ಳುತ್ತಾರೆ. ಒಮ್ಮೆ ಕುವೆಂಪುರವರು ನಿಮ್ಮ ಚಿತ್ರಗಳಲ್ಲಿ ಮಲೆನಾಡಿನ ಸೊಗಡೇ ಕಾಣುವುದಿಲ್ಲ. ನಿತ್ಯ ಹರಿದ್ವರ್ಣದ ಕಾಡು ಹಸಿರು ಕಾಣುವಂತಿದ್ದರೇ ಚೆನ್ನಾಗಿತ್ತು. ನೀವೆಲ್ಲೋ ಬಯಲು ಸೀಮೆಯ ಜನ ಅಂತ ಕಾಣುತ್ತೆ ಎಂದು ಪ್ರತಿಕ್ರಿಯಿಸಿದಾಗ ಗುರು ಅವರು ಅಷ್ಟೇ ನಾಜುಕಾಗಿ ನಾವು ಸಂಸ್ಕೃತ ಪಂಡಿತರು ಆಚಾರವಂತರು ಎಂದು ಎಲ್ಲರನ್ನು ಎಲ್ಲಾ ಕಾಲದಲ್ಲಿ ತಮ್ಮಂತೆಯೇ ಕಾಣಲು ಸಾಧ್ಯವೇ? ಒಂದು ವಿಷಯದಲ್ಲಿ ಒಬ್ಬ ವ್ಯಕ್ತಿಯನ್ನೇ ಕುರಿತು ಬರೆಯುವಾಗ ಎಲ್ಲಾ ರಸಗಳನ್ನು (ನವರಸ) ತುಂಬಲು ಸಾಧ್ಯವೇ? ವಿಭಿನ್ನ ನೆಲೆಯಲ್ಲಿ ಬರುವವರು ವ್ಯಕ್ತಪಡಿಸುವ ಸಂಭಾಷಣೆಗಳಿಂದ ಆಯಾಯ ಪಾತ್ರಗಳ ಮೂಲಕ ರಸ ವ್ಯಕ್ತಪಡಿಸುವ ಹಾಗೆ ಪ್ರತಿ ಚಿತ್ರದಲ್ಲಿಯೂ ಮರ ಗಿಡ ಬಳ್ಳಿ ಪರಿಸರ ತೋರಿಸುತ್ತಿದ್ದರೇ ಮುಖ್ಯ ಪಾತ್ರ ಮಂಕಾಗಿ ಹಿನ್ನೆಲೆಯೇ ವಿಜೃಂಭಿಸುತ್ತದೆ. ಸಾಹಿತಿಗಳಿಗೆ ನವರಸ ಪ್ರತಿಪಾದನೆಯಲ್ಲಿ ಬದ್ಧತೆ ಇರುವ ಹಾಗೆ ಕಲಾವಿದನಿಗೂ ಸಹ ಯಾವುದಕ್ಕೆ ಮಹತ್ವ ನೀಡಬೇಕೆಂಬ ಆಂತರ್ಯದ ತುಡಿತವಿರುತ್ತದೆ. ತಾವು ದೊಡ್ಡವರು. ನನ್ನ ಮಾತುಗಳಲ್ಲಿ ತಪ್ಪಿದ್ದರೇ ಕ್ಷಮಿಸಿ ಎಂದಾಗ ಕುವೆಂಪುರವರು ನಕ್ಕು ಭೇಷ್, ಇಂತಹ ಮಾತುಗಳನ್ನು ನಿರೀಕ್ಷಿಸಿದ್ದೆ. ಯಾವ ಕಲಾವಿದನಿಗಾಗಲೀ, ಸಾಹಿತಿಗಾಗಲೀ ತಾ ಬರೆದುದನ್ನು ಸಮರ್ಥಿಸಿಕೊಳ್ಳುವ ಜಾಣ್ಮೆ ಧೈರ್ಯ ಇರಬೇಕು. ನಿಮ್ಮಲ್ಲಿ ಅದನ್ನು ಕಂಡೆ. ಇವರಿಗೆ ಬಿಸಿ ಬಿಸಿ ಕಾಫಿ ತೆಗೆದುಕೊಂಡು ಬಾ ಎಂದು ಮನೆಯವರಿಗೆ ಆಜ್ಞಾಪಿಸಿ ಕಾಫಿ ಕುಡಿಸಿಯೇ ಬೀಳ್ಕೊಟ್ಟ ಸನ್ನಿವೇಶ ಸ್ಮರಿಸುತ್ತಾರೆ. ಪುನಃ ಒಂದೆರಡು ವಾರಬಿಟ್ಟು ಚಿತ್ರ ತೆಗೆದುಕೊಂಡು ಹೋದಾಗ ಗುರು ಅವರೇ ನೀವೇಕೆ ಪ್ರತಿವಾರ ಬರುತ್ತೀರಿ ಸಮಯ ಹಾಳು ನಿಮ್ಮ ಚಿತ್ರಶೈಲಿ ನನಗೆ ಒಪ್ಪಿತವಾಗಿದೆ. ಧೈರ್ಯವಾಗಿ ಬರೆದು ಮುದ್ರಣಕ್ಕೆ ಕೊಡಿ ಎಂದಾಗ ಏನು ಹೇಳಬೇಕೊ ತಿಳಿಯದಾದ ಗುರು ಅವರು ನಿಮ್ಮೊಡನೆ ವಾರ ವಾರವು ಚರ್ಚಿಸುವ ಮೂಲಕ ನನ್ನ ಜ್ಞಾನವೃದ್ಧಿಯಾಗುತ್ತದೆ. ಅದಕ್ಕಾಗಿ ಬರುತ್ತೇನೆ. ಅನ್ಯತಾ ಭಾವಿಸಬಾರದು ಎಂದಾಗ ನಿಮ್ಮಿಚ್ಛೆ ಎಂದರಂತೆ.

ಮುಖಪುಟವು ಸೇರಿದಂತೆ ಸುಮಾರು ನಲವತ್ತು ಚಿತ್ರಗಳಿದ್ದು. ರಾಮ, ಲಕ್ಷ್ಮಣ, ಸೀತೆ ಇದೇ ಕೇಂದ್ರ ಪಾತ್ರಗಳಾಗಿರುವುದರಿಂದ ಬಾಲ್ಯ, ಯೌವ್ವನ, ವೃದ್ಧಾಪ್ಯಗಳಲ್ಲಿ ಆ ಪಾತ್ರಗಳ ಹೋಲಿಕೆ, ಮುಖಚರ್ಯೆ ಬದಲಾಗದಂತೆ ಚಿತ್ರಿಸಿದ ವಿಧಾನ, ಸನ್ನಿವೇಷ ಸಂದರ್ಭಗಳಿಗನುಸಾರವಾಗಿ ಪುಟವನ್ನು ವಿನ್ಯಾಸಗೊಳಿಸಿದ ಕ್ರಮ ಇವುಗಳನ್ನು ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಸ್ಮರಿಸಿದುದು (೧೯೫೦) ಅಂದಿನ ಮುಖ್ಯಮಂತ್ರಿ ಶ್ರೀ ಚೆಂಗಲರಾಯರೆಡ್ಡಿ ಅವರು ಉದ್ಘಾಟಿಸುದುದು ಇವೆಲ್ಲಾ ಸ್ಮರಣೀಯ ದಾಖಲೆಗಳಾಗಿ ಸಾಹಿತ್ಯ ಲೇಖಕರಿಗೆ ಸಿಗುವಷ್ಟೇ ಮಾನ್ಯತೆ ಗೌರವ ಕಲಾವಿದರಿಗೂ ದೊರಕುವಂತಾಗುತ್ತದೆ. ಎಲ್ಲೆಡೆ ಪ್ರಶಂಸೆ ನುಡಿಗಳು ದೊರಕುತ್ತವೆ. ಇದರ ಕಲಾಗುರು ಎಸ್.ಎನ್. ಸ್ವಾಮಿಯವರು ಸಹ ನನ್ನ ಶಿಷ್ಯನಾದುದಕ್ಕೆ ಸಾರ್ಥಕವಾಯಿತೆನ್ನುತ್ತಾರೆ. ತದನಂತರದಲ್ಲಿ ಮೇಲಿಂದ ಮೇಲೆ ಚಿತ್ರಗಳನ್ನು ಬರೆದುಕೊಡಲು ಬೇಡಿಕೆ ಬರುತ್ತದೆ. ದೇ.ಜೆ.ಗೌ., ಎಚ್ಚೆಸ್ಕೆ ಮುಂತಾದ ಸಾಹಿತ್ಯ ದಿಗ್ಗಜಗಳ ಪುಸ್ತಕಗಳಿಗೆ ಚಿತ್ರಿಸಿಕೊಡುತ್ತಾರೆ. ಆ ನಂತರದಲ್ಲಿ ಸುಮಾರು ೫೧೦ ಪುಟದ ರಾಮಾಯಣವು ಏಳೆಂಟು ಮುದ್ರಣ ಕಂಡಿದೆ.

ಈ ಸಂದರ್ಭದಲ್ಲಿ ಲಂಬಿತವಾದ ಹೆಸರು ಸಂಕುಚಿತವಾದ ಬಗೆಯನ್ನು ನೆನಸಿಕೊಳ್ಳುತ್ತಾರೆ. ಪ್ರತಿಚಿತ್ರದಲ್ಲಿಯೂ ಎಂ.ಈ. ಗುರುಪಾದಯ್ಯ ಎಂದು ಬರೆಯುತ್ತಿದ್ದುದನ್ನು ಕಂಡ ಕುವೆಂಪುರವರು ನೋಡಿ, ನನ್ನ ಹೆಸರನ್ನು ಎಷ್ಟು ಚುಟುಕು (ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ) ಮಾಡಿಕೊಂಡಿದ್ದೇನೆ ನಿಮ್ಮ ಹೆಸರನ್ನು ಮೊಟಕು ಮಾಡಿಕೊಂಡರೇ ಒಳ್ಳೆಯದಲ್ಲವೇ ? ಎನ್ನುತ್ತಾ (ಮಠದ ಈಶ್ವರಯ್ಯ ಗುರುಪಾದಯ್ಯ) ಗುರು ಎಂದು ಬದಲಾಯಿಸಿಕೊಳ್ಳಿ ಎಂದು ಸೂಚಿಸಿದರಂತೆ. ಹೀಗೆ ಅವರ ಸನಿಹ ಹೋದಾಗಲೆಲ್ಲಾ ಒಂದೊಂದು ಹೊಸ ಹೊಳಪು ವಿಚಾರ ಮೂಡುತ್ತಿದ್ದವು. (ನಿಜಕ್ಕೂ ಅವರ ಭೇಟಿ ನನಗೊಂದು ಸೌಭಾಗ್ಯ) ಅವರ ಅನೇಕ ಪುಸ್ತಕಗಳಿಗೆ ಚಿತ್ರ ರಚಿಸಿದ್ದೇನೆಂಬ ಸಮಾಧಾನವಿದೆಯೆನ್ನುತ್ತಾರೆ.

ವಯಸ್ಕರ ಶಿಕ್ಷಣ ಸಮಿತಿಯ ಉದ್ದೇಶವೇ ಸತ್ಪ್ರಜೆಗಳನ್ನಾಗಿ ರೂಪಿಸುವುದಾದ್ದರಿಂದ ಅವಿದ್ಯಾವಂತರಿಗೆ ವಿದ್ಯೆ ಕಲಿಸುವ ಮಾರ್ಗ, ನಿತ್ಯ ನಡೆದುಕೊಳ್ಳುವ ವಿಧಾನದಲ್ಲಿ ಸುಧಾರಣೆ, ಆರೋಗ್ಯ ಕಾಪಾಡಿಕೊಳ್ಳುವಿಕೆ, ಪರಿಸರವನ್ನು ಚೊಕ್ಕಟವಾಗಿಟ್ಟುಕೊಳ್ಳುವಿಕೆ, ಇನ್ನಿತರ ಬೌದ್ಧಿಕ ತಿಳುವಳಿಕೆಯನ್ನು ಗ್ರಾಮ್ಯ ಜನರಿಗೆ ತಿಳಿಸುವ ಸಲುವಾಗಿ ಪಾಶ್ಚಾತ್ಯ ದೇಶವಾದ ಯುನೆಸ್ಕೊ ಸಂಸ್ಥೆಯವರು ಮೂಲಭೂತ ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗೋಷ್ಠಿ (Fundamental education seminar) ಯನ್ನು ಹಾಗೂ ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಅಳವಡಿಕೆ ಕುರಿತ ವಿಚಾರ

ಸಂಕೀರ್ಣಗಳನ್ನು ಏರ್ಪಡಿಸಿ ಆಯ್ದ ಕೆಲವೇ ಮಂದಿಗೆ ತರಬೇತಿಯನ್ನು ನೀಡಿ ಅವರಿಗೆ ಫಿಲ್ಮ್ ಸ್ಟ್ರಿಪ್ ಮಾಡುವುದು. ಅನಿಮೇಷನ್, ಸ್ಟೆನಶಿಲ್, ಸಿಲ್ಕ್‌ಸ್ಕ್ರೀನ್ ಪ್ರಿಂಟಿಂಗ್ ಮಾಡುವ ವಿಧಾನವನ್ನು ಕರ್ನಾಟಕಾದ್ಯಂತ ಬಂದ ಅಧಿಕಾರಿಗಳಿಗೆ ಕಲಿಸಿಕೊಡುವ ಉದ್ದೇಶವಾಗಿದ್ದು ಗುರು ಅವರದು ಮಹತ್ತರ ಪಾತ್ರವಾಗಿರುತ್ತದೆ. ಡೆಲ್ಲಿ, ಮೈಸೂರು ಮತ್ತಿತರ ಕಡೆಗಳಲ್ಲಿ ನಡೆದ ತರಬೇತಿಗಳಲ್ಲಿ ಮುಖಪುಟ ವಿನ್ಯಾಸ (Book covering) ಸಂದರ್ಭ ಚಿತ್ರರಚನೆ (Illustration) ಒಳಪುಟ ವಿನ್ಯಾಸ (Book design)ಗಳನ್ನು ಕಲಿಸುವ ಮೂಲಕ ಪಠ್ಯ ಪುಸ್ತಕ ರಚನೆಗೆ ಬಹಳ ಸಹಾಯಕವಾಯಿತೆನ್ನುತ್ತಾರೆ.

ವಿದ್ಯಾ ಇಲಾಖೆಯ ಪಠ್ಯ ಪುಸ್ತಕ ಮಂಡಲಿಯಿಂದ ಪ್ರಕಟವಾದ ಬಹುತೇಕ ಪುಸ್ತಕಗಳಲ್ಲಿ ಗುರು ಅವರದೇ ಚಿತ್ರಗಳು ರಾರಾಜಿಸುತ್ತಿದ್ದವು. ಆಗ್ಗೆ ಸಾಕಷ್ಟು ಸಂಖ್ಯೆಯ ವರ್ಣ ಚಿತ್ರ ಕಲಾವಿದರಿದ್ದರೇ ವಿನಃ ಸಂದರ್ಭ ಚಿತ್ರ ರಚನಾಕಾರರು ಬಹಳ ಅಪರೂಪವಾಗಿದ್ದರು. ಹನ್ನೆರಡು ವರ್ಷದ ಆ ದೀರ್ಘ ಸೇವೆಯಲ್ಲಿ ಪಠ್ಯ ಪುಸ್ತಕಗಳಿಗೆ ಹಾಗೂ ಇಲಾಖೆಯ ಮಾಸ ಮತ್ತು ವಾರ ಪತ್ರಿಕೆಗಳಿಗೆ ಇನ್ನಿತರ ಖಾಸಗಿ ಮುದ್ರಕರಿಗೆ ಬರೆದುಕೊಟ್ಟ ಚಿತ್ರಗಳ ಸಂಖ್ಯೆ ಅಗಣಿತ. ಅವರ ಕೆಲಸದ ವೇಗ ಹೇಗಿತ್ತೆಂದರೇ ಒಂದೆರಡು ದಿನದಲ್ಲೇ ಒಂದು ಪಠ್ಯ ಪುಸ್ತಕಕ್ಕಾಗುವಷ್ಟು ಚಿತ್ರಗಳನ್ನು ಬರೆದುಬಿಡುತ್ತಿದ್ದರಂತೆ. ಒಂದು ಡಬ್ಬಿ ನಶ್ಯ, ಥರ್ಮಾಪ್ಲಾಸ್ಕಿನಲ್ಲಿ ಎರಡು ಮೂರು ಕಪ್ ಕಾಫಿ ಇಷ್ಟಿದ್ದರೇ ಇಡೀ ರಾತ್ರಿಯೆಲ್ಲಾ ಕುಳಿತು ಬೆಳಗಾಗುವುದರೊಳಗಾಗಿ ಆರಿಸಿಕೊಂಡ ಪುಸ್ತಕಕ್ಕೆ ಒಂದು ಸ್ವರೂಪ ತರುವ ದೈತ್ಯ ಶಕ್ತಿ ಈ ಗುರೂದು. ಅದೇನ್ ಕೈಯೇನ್ರಿ. ಸ್ವಲ್ಪ ಕುಡಿಸಿ ರೇಸ್ ಕುದುರೆ ಮೇಲೆ ಕುಳಿತ ಚಾಲಕ ತನ್ನ ಕಾಲಲ್ಲಿ ಮೀಟಿ ಒಂದು ಕೈಯಲ್ಲಿ ಲಗಾಮು ಹಿಡಿದು ಮತ್ತೊಂದರಲ್ಲಿ ಅದರ ದೇಹದ ಭಾಗವನ್ನು ತಟ್ಟಿದೊಡನೆಯೇ ನಾಗಲೋಕದಲ್ಲಿ ಓಡುವಂತೆ ಕುಂಚಕ್ಕೆ ಬಣ್ಣವೆಂಬ ನೀರನ್ನು ಕುಡಿಸಿ ಕಾಗದದ ಮುಂದೆ ಕುಳಿತು ಕುಂಚದ ಕೈ ಓಡಿಸಲಿಕ್ಕೆ ಹತ್ರೆ ಗುರಿ ತಲುಪುವರೆಗೆ ನಿಲ್ಲುವ ಹಾಗೆ ಇಲ್ಲ. ಅದೇನ್ ಮನುಷ್ಯಾರ್ರಿ, ನಾನೆಲ್ಲೂ ನೋಡಲಿಲ್ಲ ಇಂತ ಮಂದಿಯನ್ನು ಎಂದು ಅವರ ಆಪ್ತಮಿತ್ರ ಪಿ.ಆರ್.ತಿಪ್ಪೆಸ್ವಾಮಿಯವರು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಇದು ಉತ್ಪ್ರೇಕ್ಷೆ ಮಾತಲ್ಲ. ನಿತ್ಯವೂ ಸ್ಕೆಚ್ ಮಾಡುತ್ತಿದ್ದುದರ ಪರಿಣಾಮ. ಆ ಸಂದರ್ಭ ಸನ್ನಿವೇಷಗಳನ್ನು ಊಹಿಸಿಕೊಳ್ಳಲಿಕ್ಕೆ, ಊಹಿಸಿದುದನ್ನು ತಕ್ಷಣ ರೇಖಿಸುವುದಕ್ಕೆ ಸಹಾಯಕವಾಗುತ್ತಿತೆಂಬುದು ವಾಸ್ತವಿಕ ಸತ್ಯ.

ವಯಸ್ಕರ ಶಿಕ್ಷಣ ಸಮಿತಿ ಸೇವೆಯಿಂದ ಬಿಡುಗಡೆ (೧೯೬೨) ಹೊಂದಿದನಂತರ ಅದೇ ವರ್ಷ ಆಡಳಿತ ನಿರ್ವಹಣೆ ತರಬೇತಿ ಸಂಸ್ಥೆ (Administrative Training Institute) ಯಿಂದ ಯಲ್ಲಿನ




ಓರಿಯೆಂಟೇಶನ್ ಸ್ಟಡಿಸೆಂಟರ್‌ನಲ್ಲಿ ಕಲಾವಿದನಾಗಿ ಸೇರ್ಪಡೆಹೊಂದಿ ಹೆಚ್ಚಿನ ಶಿಕ್ಷಣ ತರಬೇತಿಗಾಗಿ ಉತ್ತರ ಪ್ರದೇಶ ಮತ್ತು ಇತರ ಕೇಂದ್ರಗಳಲ್ಲಿ ಸಂಚರಿಸುತ್ತಾರೆ. ಪಂಚಾಯತ್ ರಾಜ್ ಕಲ್ಪನೆಯಡಿಯಲ್ಲಿ ಗ್ರಾಮಾಭ್ಯುದಯಕ್ಕೆ ೫ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡಾಗ ಅಲ್ಲಿನ ಗ್ರಾಮಸ್ಥರಿಗೆ **ಉತ್ಪಾದನೆ ಹೆಚ್ಚಿಸಲು ಹೆಚ್ಚು ದುಡಿಯಿರಿ** ಎನ್ನುತ್ತಾ ದುಡಿಯುವ ಕ್ರಮವನ್ನು, ಕೆರೆಕಟ್ಟೆ ಕಟ್ಟಿ ಒಡ್ಡನ್ನು ನಿರ್ಮಾಣ ಮಾಡಿ ನೀರಿನ ಸಂಗ್ರಹ ಮಾಡುವುದು, ಕಳೆ ಕೀಳುವಲ್ಲಿ ವೈಜ್ಞಾನಿಕ ವಿಧಾನ ಅನುಸರಿಸುವುದು, ಉತ್ತಮ ಬೀಜವನ್ನೇ ಆಯ್ದುಕೊಳ್ಳುವ ಪರಿ ಇತ್ಯಾದಿ ವಿಷಯಗಳ ದೃಶ್ಯ ಪಟಗಳನ್ನು ಬರೆದು ಅವುಗಳನ್ನು ಪ್ರದರ್ಶಿಸಿ ಸಾಕಾರವಾಗಿ ತಿಳುವಳಿಕೆ ನೀಡುವ ಕ್ರಮ ಅನುಸರಿಸುತ್ತಾರೆ. ಕೇಂದ್ರ ಸರ್ಕಾರದ ಈ ಯೋಜನೆಗೆ ಆರ್ಥಿಕ ನೆರವು ಸಾಕಷ್ಟು ಬರುತ್ತದೆ. ಐ.ಎ.ಎಸ್. ಮತ್ತು ಕೆ.ಎ.ಎಸ್. ಮಟ್ಟದ ಅಧಿಕಾರಿಗಳು ಸಹ ಪಾಲ್ಗೊಂಡಿರುತ್ತಾರೆ.

ಸರ್ಕಾರಿ ಮಟ್ಟದಲ್ಲಿ ಗುರು ಅವರ ಕಲಾಸೇವೆ ವಿವಿಧ ಮುಖಗಳ-ಲ್ಲಿರುತ್ತವೆ. ಸಿದ್ಧ ಪ್ರಸಿದ್ಧರಾದ ಆ.ನ. ಸುಬ್ಬರಾವ್, ಟಿ.ಪಿ. ಅಕ್ಕಿ, ಎಂ.ವಿ. ಮಿಣಜಿಗಿ, ಡಿ.ವಿ. ಹಾಲಬಾವಿ, ಆರ್.ಎಂ. ಹಡಪದ್ ಮುಂತಾದ ಕಲಾ ಶಿಕ್ಷಕರ ಜತೆಗೂಡಿ ಪರೀಕ್ಷಾ ವೀಕ್ಷಕರಾಗಿ, ಅವುಗಳ ಮೌಲ್ಯಮಾಪಕರಾಗಿ, ಪ್ರಶ್ನೆ ಪತ್ರಿಕೆ ತಯಾರಿಕಾ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ ಅನುಭವ ಅವರದು. ಆ ನಂತರದಲ್ಲಿ ಗೂಳಣ್ಣನವರ್ ಪಠ್ಯ ಪುಸ್ತಕಕ್ಕೆ ಚಿತ್ರ ರಚಿಸುವ ಕಲಾವಿದರಾಗಿ ಸೇವೆ ಸಲ್ಲಿಸಿದುದರಲ್ಲದೇ ಮುಂಬಡ್ತಿ ಪಡೆದು ಕಲಾಶಾಲೆ ತನಿಖಾಧಿಕಾರಿಯಾಗಿ ನಿವೃತ್ತಿ ಹೊಂದುತ್ತಾರೆ. ಈಗ ಅವರೊಂದು ನೆನಪು ಮಾತ್ರ.

ಭಿತ್ತಿ ಚಿತ್ರರಚನೆ

ಭಿತ್ತಿಯಲ್ಲಿರುವ ಚಿತ್ರ ಯಾವ ರೀತಿ ತನ್ನ ಮೂಲವರ್ಣವನ್ನು ಕಳೆದುಕೊಂಡು ಕಳಾಹೀನವಾಗಿರುತ್ತದೋ ಅದೇ ರೀತಿಯಾದ ಬಣ್ಣಗಳನ್ನು ಸಂಯೋಜಿಸಿ ಚಿತ್ರಿಸುವುದು ಅಗತ್ಯವಾದುದರಿಂದ ಕಲಾವಿದನ ಜಾಣ್ಮೆ ಅನುಕರಣೆ ಮಾಡುವುದರಲ್ಲಿತ್ತದೆಯೇ ವಿನಃ ಇನ್ನಾವ ಬದಲಾವಣೆ ಅವಶ್ಯವೆನಿಸುವುದಿಲ್ಲ. ಮೇಲ್ಮಾಡುವಿನಲ್ಲಿನ (Ceiling) ಚಿತ್ರವನ್ನು ನಕಲು ಮಾಡಬೇಕಾದಾಗ ಅಟ್ಟವನ್ನು ಮರದಿಂದ ಕಟ್ಟಿಕೊಂಡು ಅಂಗಾತ ಮಲಗಿಯೇ ಪಾರದರ್ಶಕ ಕಾಗದವನ್ನು (Tracing Paper) ಅದರ



ಮೇಲೆ ಹರಡಿ ಅವಶ್ಯವಿರುವೆಡೆ ಅಂಟು ಕಾಗದದಿಂದ ಅಂಟಿಸಿ ಯತಾರೀತಿಯಲ್ಲಿಯೇ ನಕಲು ಮಾಡಿಕೊಂಡು ತದನಂತರದಲ್ಲಿ ಯಾವ ಕಾಗದ ಅಥವಾ ಕ್ಯಾನವಾಸ ಮೇಲೆ ಮಾಡ-ಬೇಕೆಂದಿರುವೆವೋ ಅದರ ಮೇಲೆ ಮತ್ತೆ ನಕಲಿಸಿ ಬಣ್ಣಗಳಿಂದ ಯತಾವತ್ತತೆಯನ್ನು ತಂದಿರುವ ಗುರು ಅವರು ಶ್ರವಣಬೆಳಗೊಳದ ಜೈನಮಠ, ಮೈಸೂರಿನ ಅರಮನೆಯೊಳಗಿರುವ ವರಾಹ-ಸ್ವಾಮಿಯ ದೇವಾಲಯ, ಮುಡುಕುತೊರೆಯ ಮಲ್ಲಿಕಾರ್ಜುನಸ್ವಾಮಿಯ ದೇವಾಲಯ, ನರಗುಂದದ ರಾಜವಾಡೆ, ಶಿರಾದಲ್ಲಿನ ರೇವಣಸಿದ್ದೇಶ್ವರ ದೇವಾಲಯ-ಗಳಿರುವುದರಲ್ಲಿ ಕೆಲವನ್ನು ಚಿತ್ರಿಸಿದ್ದಾರೆ. ಮೇಲ್ಮಾಡುವಿನಲ್ಲಿರುವ ಚಿತ್ರದ ನಕಲಿಗಿಂತ ಗೋಡೆಯ ಮೇಲಿರುವುದು (Wall painting) ಸುಲಭವೆನ್ನುವ ಗುರು ಅವರು ತಮ್ಮೊಡನೆ ವೈ. ಸುಬ್ರಮಣ್ಯರಾಜು, ಎಸ್.ಎಸ್. ಕುಕ್ಕೆ, ಎಂ.ಎ. ಚೆಟ್ಟಿ, ಕಮಲಾಕ್ಷಿ, ನಂಜುಂಡರಾವ್, ಕಾಳಪ್ಪ, ಎಂ.ಎಸ್. ಚಂದ್ರಶೇಖರ ಮತ್ತಿತರರು ಕೆಲಸ ಮಾಡಿದುದನ್ನು ನೆನೆಯುತ್ತಾ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಾಮರಾಜನಗರ, ಸೀಬಿ, ಯಡಿಯೂರು, ಹಂಪೆ, ಶ್ರೀರಂಗಪಟ್ಟಣ, ಮಾಗಡಿ, ಗುಬ್ಬಿ ಇನ್ನು ಕೆಲವು ಕಡೆ ಬಿತ್ತಿ ಚಿತ್ರಗಳಿದ್ದು ಅವುಗಳನ್ನು ದಾಖಲಿಸಿಕೊಳ್ಳುವ ಕೆಲಸ ಅದೆಷ್ಟು ಪ್ರಗತಿಯಾಗಿದೆಯೋ ನನಗೆ ತಿಳಿಯದು. ಮುಂದಿನ ಪೀಳಿಗೆಗೆ ಇದೊಂದು ಸ್ಮರಣಾರ್ಹ ಕೆಲಸವೆನ್ನುತ್ತಾರೆ.

ರಾಜ್ಯದ ಲಲಿತಕಲಾ ಅಕಾಡೆಮಿಗೆ ೨ ಅವಧಿಗೆ(೧೯೮೦-೮೨/೮೩-೮೬) ಸದಸ್ಯರಾಗಿದ್ದು, ಇವರು ಪುಸ್ತಕ ಪ್ರಕಟಣ ಸಮಿತಿ, ಪ್ರದರ್ಶನ ಸಮಿತಿ ಇನ್ನಿತರ ವಿವಿಧ ಸಮಿತಿಗಳಲ್ಲಿ ಇದ್ದ ಅನುಭವ ಅವರದು. ಅಕಾಡೆಮಿ ಸದಸ್ಯರಾಗಿದ್ದ ಅವಧಿಯಲ್ಲೇ ಪ್ರಶಸ್ತಿಯನ್ನು ಪಡೆದದ್ದು ಒಂದು ವಿಶೇಷ (೧೯೮೩) (ಈಗ ಸದಸ್ಯರಾದವರು ತಮ್ಮ ಅವಧಿ ಮುಗಿಯುವ ತನಕ ಪ್ರಶಸ್ತಿ ಪಡೆಯುವ ಹಾಗಿಲ್ಲ).

ಸಾಂಘಿಕ ಚಟುವಟಿಕೆಗಳು

ಸಂಘ ಸಂಸ್ಥೆಗಳ ಒಡನಾಟವೆಂಬುದು ಇಂದಿಗೂ ಅವರ ನಿರಂತರ ಕ್ರಿಯೆಯಾಗಿದೆ, ಐದು ದಶಕಗಳಿಗಿಂತಲೂ ಹೆಚ್ಚು ಕಾಲ ಮೈಸೂರಿನಲ್ಲೇ ನೆಲೆಸಿರುವುದರಿಂದ ಕಲಾ ಸಂಬಂಧಿತವಾದ ಎಲ್ಲಾ ಚಟುವಟಿಕೆಗಳಲ್ಲಿ ಭಾಗಿಯಾದವರು, ದಸರಾ ಕಲಾ ಪ್ರದರ್ಶನ ಕುರಿತಂತೆ ಕೇಳಿದಾಗ ಚುಟುಕಾಗಿ ಹೀಗೆ ಉತ್ತರಿಸುತ್ತಾರೆ. ಹಿಂದಿನ ದಸರಾ ಪ್ರದರ್ಶನದಲ್ಲಿ ಭಾಗವಹಿಸುವುದು

ಒಂದು ಹೆಮ್ಮೆಯ ಸಂಗತಿ. ಇಂದಿನ ದಸರಾ ಪ್ರದರ್ಶನದಲ್ಲಿ ಪಾಲ್ಗೊಳ್ಳುವುದು ಮುಜುಗರದ ಅಸಂಗತಿ. ಇವೆರಡರ ನಡುವೆ ೩೫ ವರ್ಷ ಕಲಾಪ್ರದರ್ಶನ ಸಮಿತಿಯ ಸದಸ್ಯನಾಗಿ ಎಲ್ಲಾ ಹಂತಗಳಲ್ಲಿ ಕೆಲಸ ಮಾಡಿದ್ದೇನೆನ್ನುತ್ತಾರೆ.

ಪಿ.ಆರ್. ತಿಪ್ಪೇಸ್ವಾಮಿ, ರಘೋತ್ತಮ ಪುಟ್ಟಿ, ಕಾಳಪ್ಪ, ಎಂ.ಜೆ. ಶುದ್ಧೋದನ, ಆರ್. ಸೀತಾರಾಂ ಮೊದಲ್ಗೊಂಡು ಇನ್ನಿತರ ಕಲಾವಿದರೆಲ್ಲಾ ಸೇರಿ 'ಚಿತ್ರಕಲಾ ಸಂಘ' ಮಾಡಿಕೊಂಡು ಆಗಾಗ್ಗೆ ಪ್ರದರ್ಶನ ಮಾಡುವುದು ಕಲಾವಿದರಲ್ಲಿ ಯಾರಾದರೂ ಅನಾರೋಗ್ಯವಾದರೇ ಕ್ಷೇಮ ವಿಚಾರಿಸುವುದು. ಪ್ರಶಸ್ತಿ ಪುರಸ್ಕಾರಗಳು ದೊರಕಿದಾಗ ಸನ್ಮಾನ ಸಮಾರಂಭ ಏರ್ಪಡಿಸುವುದು ಕಲೆ ಮತ್ತು ಕಲಾವಿದರಿಗೆ ಅನ್ಯಾಯವಾದಾಗ ಪ್ರತಿಭಟಿಸುವುದು ಇತ್ಯಾದಿ ಧ್ಯೇಯವುಳ್ಳ ಸಂಸ್ಥೆಯ ಪದಾಧಿಕಾರಿಯಾಗಿ, ಸದಸ್ಯನಾಗಿ ಕೆಲಸ ಮಾಡಿದ್ದಾರೆ.

ಮೈಸೂರಿನ ಬಹುತೇಕ ಹಿರಿಯ ಕಲಾವಿದರಿಗೆ ಸ್ವತಂತ್ರವಾಗಿ ಏಕವ್ಯಕ್ತಿ ಪ್ರದರ್ಶನ ಮಾಡುವ ಇರಾದೆ ಇದ್ದಂತೆ ತೋರುತ್ತಿರಲಿಲ್ಲ. ಅದಕ್ಕೆ ಎರಡು ಮುಖ್ಯ ಕಾರಣವೆನ್ನಬಹುದು. ಅದಕ್ಕಾಗುವ ವೆಚ್ಚದ ಚಿಂತೆ ಒಂದೆಡೆಯಾದರೇ, ಕಲಾವಿದರೆಂದು ಎಲ್ಲೆಡೆ ಗುರುತಿಸಿರುವಾಗ ಅದರ ಅವಶ್ಯಕತೆಯಾದರೂ ಏನು ಎಂಬುದು ಈ ಮಾತು ನನಗೂ ಅನ್ವಯಿಸುತ್ತದೆ, ನೋಡಿ ಇದುವರೆಗೂ ನಾನೆಂದು ಏಕವ್ಯಕ್ತಿ ಕಲಾಪ್ರದರ್ಶನ ಮಾಡಿದವನಲ್ಲ. ನಾನು ಬರೆದುದೆಲ್ಲಾ ಮುದ್ರಣವಾಗಿ ಒಂದಲ್ಲಾ ಒಂದು ರೀತಿಯಲ್ಲಿ ಪ್ರದರ್ಶನ-ವಾಗುತ್ತಲೇ ಇತ್ತು ಎಂದು ತಮ್ಮ ಮನದಾಳದ ಮಾತನ್ನು ಮುಕ್ತವಾಗಿ ಹೇಳುತ್ತಾರೆ.

ಬೆಂಗಳೂರಿನ ಚಿತ್ರಕಲಾ ಪರಿಷತ್ ಸಂಸ್ಥೆಯ ಆಜೀವ ಸದಸ್ಯರಾಗಿ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪರಿಷತ್ತಿನ ಆರಂಭದ ದಿನದಿಂದಲೂ ಇಂದಿನವರೆಗೆ ನಡೆದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದು ಅದರ ಏಳುಬೀಳನ್ನು ಕಂಡವರು.

ಹಿರಿಯ ಕಲಾವಿದರೇ ಸೇರಿ ಸಂಘಟಿಸಿಕೊಂಡ ಬೆಂಗಳೂರಿನ 'ಚಿತ್ರಕಲಾವಿದರ ಮಹಾ ಪರಿಷತ್ತು' ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಾಗೂ ಮೈಸೂರಿನ ತಾವು ಕಲಿತ ಕಲಾಶಾಲೆಯಾದ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಕಲಾ ಸಂಸ್ಥೆಯ ಚಟುವಟಿಕೆಗಳಲ್ಲಿ ಅಥವಾ ಇನ್ನಿತರ ಯಾವುದೇ ಖಾಸಗಿ ಸಂಸ್ಥೆಗಳಲ್ಲಿನ ಕಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ದೊಡ್ಡಗುಣ ಅವರದು.

ಇವುಗಳಲ್ಲದೇ ಮೈಸೂರಿನ ಸ್ವಾತಂತ್ರ್ಯ ಯೋಧರ ಯೋಗಕ್ಷೇಮ ಸಂಸ್ಥೆ, ಜೆ.ಎಸ್.ಎಸ್. ಹಳೇ ವಿದ್ಯಾರ್ಥಿಗಳ ಸಂಘ, ಜೆ.ಎಸ್.ಎಸ್. ಸಂಗೀತ ಸಭಾ, ವೀರಶೈವ ಸ್ನೇಹ ಬಳಗ ತಾವು ವಾಸಿಸುತ್ತಿರುವ ವಿವೇಕಾನಂದನಗರ ನಿವಾಸಿಗಳ ವೇದಿಕೆ ಸಂಘ, ಉಪಾಧ್ಯ ಕಲಾ ಪ್ರತಿಷ್ಠಾನ ಸೇರಿದಂತೆ ಇನ್ನು ಹಲವಾರು ಸಂಸ್ಥೆಗಳಲ್ಲಿ ಇಂದಿಗೂ ತೊಡಗಿಕೊಂಡಿರುವ ಗುರು ಅವರದು.


ಇತರರಿಂದ ಗುದ್ದು ಭಾರದಂತೆ ಸದ್ದಿಲ್ಲದ ಕೆಲಸ.
ಅಪಾರವಾದ ವಿದ್ಯಾ ಸಂಪತ್ತಿದ್ದರೂ ತೋರ್ಪಡಿಸದ ಮನಸ.
ಪ್ರಚಾರಕ್ಕೊಳಗಾಗದೆ ಸದಾ ಸೇವೆಯ ಕನಸ.

ಇವು ಅವರ ಆಂತರಿಕ ಗುಣಗಳಾಗಿ ಸನಿಹದಿಂದ ಸುಳಿದಾಡುವವರಿಗೆ ಗೋಚರವಾಗುತ್ತದೆ.

ಶ್ರೀಯುತರಿಗೆ ರಾಜ್ಯ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ, ಅಖಿಲ ಭಾರತ ಕಲೆ ಮತ್ತು ಕುಶಲ ಕಲೆ ಅಭಿವೃದ್ಧಿ ಸಮಿತಿ ನವದೆಹಲಿ ಇವರ ಗೌರವ ಪ್ರಶಸ್ತಿ, ಮತ್ತು ಭಾರತಕ್ಕೆ ಸ್ವಾತಂತ್ರ್ಯ ಬಂದ ಐವತ್ತನೇ ವರ್ಷದ ನೆನಪಿಗಾಗಿ (೧೯೪೭-೯೭) ಕರ್ನಾಟಕ ರಾಜ್ಯ ಸರ್ಕಾರ ಸ್ವಾತಂತ್ರ್ಯ ಯೋಧ ಎಂದು ಗುರುತಿಸಿ ಗೌರವಿಸಲ್ಪಟ್ಟ ಪುರಸ್ಕಾರ ಇವಲ್ಲದೇ ಅವರು ಸ್ಥಳೀಯವಾಗಿ ನೆಲಸಿರುವ ಮೈಸೂರಿನಲ್ಲಿ ಹಾಗೂ ಹುಟ್ಟೂರಾದ ಕಂಪ್ಲಿಯಲ್ಲಿ ನಡೆದ ಸನ್ಮಾನಗಳು ಹಲವಾರು.

ನೈಜಕಲೆಗೆ ಬುನಾದಿ


ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದೆಲ್ಲೆಡೆ ಚಿತ್ರಕಲೆ ಒಂದು ರೀತಿಯ ಜಾನಪದೀಯ ಅಂಶದಿಂದೊಡಗೂಡಿ ರಚಿತವಾಗಿರುತ್ತವೆಂಬುದಕ್ಕೆ ಕಾಂಗ್ರಾ, ಪಹಾಡಿ, ಮದುಬನಿ, ರಜಪೂತ, ಮೊಘಲ, ಕರ್ನಾಟಕ, ತಂಜಾವೂರು ಸಾಂಪ್ರದಾಯಿಕ ಕಲೆ, ಭಿತ್ತಿ ಚಿತ್ರಗಳು ಹಾಗೂ ಅಜಂತಾ ಚಿತ್ರಗಳು ಮೊದಲ್ಗೊಂಡಂತೆ ವೃತ್ತಿ ಪ್ರಧಾನವಾದವುಗಳು ಅಂದರೆ ರಾಜ ಅಥವಾ ಧರ್ಮಾಧಿಕಾರಿ ಇವರುಗಳನ್ನು ವೈಭವೀಕರಿಸುವ ನೆಪದಲ್ಲಿ ಉಳಿದ ಎಲ್ಲಾ ಪರಿವಾರವನ್ನು ರಾಣಿಯು ಸೇರಿದಂತೆ ಕಿರು ರೂಪದಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಸಿಂಹಾಸನ ಮತ್ತಿತರ ಪೀಠೋಪಕರಣಗಳು ಹಾಗೂ ಹಿನ್ನೆಲೆಯ ಮನೆ ವಾತಾವರಣ ಇಲ್ಲವೆ ಪರಿಸರವನ್ನು ಚಿತ್ರಿಸುವಾಗಲೂ ನೈಜತೆಯಿಂದಲ್ಲದಿರುವುದನ್ನು ಹಳೇ ಚಿತ್ರಪಟಗಳಿಂದ ಇಲ್ಲವೇ ಸಂಗ್ರಹಾಲಯಗಳಲ್ಲಿರುವ ಚಿತ್ರಗಳಿಂದ ನೋಡಿ ತಿಳಿಯಬಹುದಾಗಿದೆ. ಭಾರತದಲ್ಲಿನ ವರ್ಣಾಶ್ರಮ ಧರ್ಮ ಚಿತ್ರಕಲೆಗೂ ಅಂಟಿತ್ತು ಎಂಬುದಕ್ಕೆ ರಾಜನನ್ನು ಅತಿ ಎತ್ತರದಲ್ಲಿ ಕೂರಿಸಿ ಉಳಿದಂತೆ ಊಳಿಗಮಾನ್ಯದವರು, ಛತ್ರಿಛಾಮರದವರು, ಪದಾದಿ ಸೈನ್ಯದಳ ಇವೆಲ್ಲವನ್ನು ಒಂದೊಂದು



ಅಂಕಣದಂತೆ ಮಾಡಿ ಚಿತ್ರಿಸಿದ ವಿಧಾನ ಕಾಣಬಹುದು. ಮರವನ್ನು ರಚಿಸುವಾಗಲೂ ಎಲೆಗಳನ್ನು ಎಣಿಸಬಹುದಾಗುವಂತೆ ಚಿತ್ರಿಸುವ ವಿಧಾನ ಕಾಣಬಹುದು. ಆದರೆ ಬ್ರಿಟೀಷರ ಕಲೆ ಭಾರತಕ್ಕೆ ಕಾಲಿಟ್ಟ ನಂತರ ಅವರ ಸ್ವರೂಪವೇ ಬೇರೆಯಾಯಿ-ತೆನ್ನಬಹುದು.

ವ್ಯಕ್ತಿ ಪ್ರಧಾನವಾಗದೆ ಸಮಷ್ಟಿ ಮುಖ್ಯವಾಗಿ ಇರುವಿಕೆಗಿಂತ ಕಾಣುವಿಕೆ ಮುಖ್ಯವಾಗಿ ದೂರ ಸಮೀಪಗಳ ವ್ಯತ್ಯಯುಗಳನ್ನು (Perspective) ಗುರುತಿಸುತ್ತ ಜೊತೆಗೆ ನೆಳಲು ಬೆಳಕುಗಳ (Light and Shade) ಚೆಲ್ಲಾಟದೊಡನೆ ಘನಾಕೃತಿ ನಿರೂಪಿಸುವ ವಿಧಾನ ಚಾಲ್ತಿಗೆ ಬಂತು. ಮುಂಬೈನಲ್ಲಿ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಆರಂಭವಾಗಿ ಬ್ರಿಟೀಷ್ ಕಲಾ ಶಿಕ್ಷಣ ಪದ್ಧತಿಯಾದ ನೈಜ ಚಿತ್ರಣ ಬಂದ ನಂತರದಿಂದ ಅಲ್ಲಿಂದ ಕಲಿತು ಬಂದ ಅನೇಕರು ಕಲಾ ಶಿಕ್ಷಕರಾಗಿ ತಾವು ಕಲಿತ ಬ್ರಿಟೀಷ್ ಪದ್ಧತಿಯನ್ನೇ ಎಲ್ಲೆಡೆ ಬೋಧಿಸುದುದರಿಂದ ನೈಜ ಕಲೆ ವ್ಯಾಪಕವಾಗಿ ಬೆಳೆಯಿತೆನ್ನಬಹುದು. ಅದಕ್ಕಿಂತ ಕೊಂಚ ಪೂರ್ವದಲ್ಲಿ ರಾಜಾ ರವಿವರ್ಮ (೧೮೪೮-೧೯೦೬) ಬ್ರಿಟೀಷ್ ನೆಲದಲ್ಲಿಯೇ ಚಿತ್ರಕಲೆ ಕಲಿತು ಬಂದು ಭಾರತದಲ್ಲಿನ ಶಾಬ್ದಿಕ ರೂಪದಲ್ಲಿದ್ದ ದೇವದೇವತೆಗಳಿಗೆ ದೃಶ್ಯ ರೂಪವನ್ನು ಕೊಡುವ ಮೂಲಕ ಒಂದು ಮಹತ್‌ಕ್ರಾಂತಿ ಮಾಡಿದುದನ್ನು ಕಂಡ ಜನ ಸಮುದಾಯ ಅಂತಹದನ್ನೇ ಬಯಸುವ ಮೂಲಕ ಕಲಾಕಾರರು ಅನುಕರಣೆ ಮಾಡುತ್ತಾ ಹೋದಂತೆ ಆ ಪರಂಪರೆ ಬೆಳೆಯಿತೆನ್ನುವುದಕ್ಕೆ ಗುರು ಅವರಿಗೆ ಹೇಳಿಕೊಡುತ್ತಿದ್ದ ಗುರುಗಳಾದ ಎಸ್.ನಂಜುಂಡಸ್ವಾಮಿ, ವೈ.ಸುಬ್ರಮಣ್ಯ ರಾಜು, ಎಫ್.ಎಂ.ಸೂಫಿ, ಕೇಶವ ರಾಜು ಇವರ ಹಿಂದಿನವರಾದ ಕೇಶವಯ್ಯ, ವೈ.ನಾಗರಾಜು, ಶಂಕರರಾಜು, ಮುಖ್ಯಸ್ಥರಾದ ಎನ್.ಜಿ.ಪಾವಂಜಿಯವರು ಸೇರಿದಂತೆ ಎಲ್ಲರೂ ನೈಜ ಶೈಲಿಗೆ ಶರಣಾದುದನ್ನು ಕಾಣಬಹುದಾಗಿದ್ದು ಮುಂದಿನ ಪೀಳಿಗೆ ಅದನ್ನನುಸರಿಸುವುದು ಅಗತ್ಯವೂ ಮತ್ತು ಅನಿವಾರ್ಯವೂ ಆಗಿತ್ತು. ಕರ್ನಾಟಕ ಮಾತ್ರವಲ್ಲ ದೇಶದಾದ್ಯಂತ ನೈಜ ಕಲೆಯ ಅಲೆ ಬಿರುಗಾಳಿಯಂತೆ ಬೀಸತೊಡಗಿತ್ತು. (ಇಂದು ಹತ್ತಾರು ವರ್ಷದಲ್ಲಿ ಕಂಪ್ಯೂಟರ್ ತನ್ನ ಬಾಹುಗಳನ್ನು ಎಲ್ಲೆಡೆ ಚಾಚಿ ಆಕರ್ಷಿಸಿರುವಂತೆ) 19ನೇ ಶತಮಾನದೆಲ್ಲೆಡೆ ವಿಕಶಿಸಿದ ನೈಜ ಕಲೆ ದೇವದೇವತೆಗಳ ಚಿತ್ರ ಪಟಗಳ ಮೂಲಕವೇ ಒಂದು ಸ್ಥಾಯಿಭಾವ ಪಡೆಯಿತು. ರವಿವರ್ಮನ ನಂತರದ ಶಿಲ್ಪ ಸಿದ್ದಾಂತಿ ಸಿದ್ದಲಿಂಗಸ್ವಾಮಿಗಳು ನಾಗೇಂದ್ರ ಸ್ತಪತಿ, ಎಂ.ಟಿ.ವಿ. ಆಚಾರ್ಯ, ಎಸ್.ಎಂ. ಪಂಡಿತ್, ಎಸ್.ಎಸ್. ಕುಕ್ಕೆ ಮುಂತಾದವರು

ರಚಿಸಿದ ದೇವತಾ ಪಟಗಳು (ಕ್ಯಾಲೆಂಡರ್) ಎಲ್ಲೆಡೆ ವಿಜೃಂಭಿಸಿದವು. ಇಂದು ಪಟ ಚಿತ್ರರಚನೆಯು ಕಳೆಗುಂದಿದ್ದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ನಿಟ್ಟಿನಲ್ಲಿದೆ. ಇದೇನೇ ಇರಲಿ, ಈ ಎಲ್ಲಾ ಕಲಾವಿದರನ್ನು ಕಂಡ ಗುರು ಅವರು ನೈಜಕಲೆಯನ್ನು ರೇಖಾ ಚಿತ್ರಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಕಂಡುಕೊಂಡವರು.



ಕ್ಷಿಪ್ರ ರೇಖಾಚಿತ್ರಗಳು

ತಾಯಿಬೇರು ಚೆನ್ನಾಗಿದ್ದರೇ ಗಿಡವಾಗಿ ಮರವಾಗಿ, ಹೆಮ್ಮರವಾಗಿ ಬೆಳೆಯುಬಲ್ಲದು. ತಾಯಿಬೇರಿನಲ್ಲಿಯೇ ಸತ್ವವಿಲ್ಲದಿದ್ದರೆ ಅದರ ಬೆಳವಣಿಗೆ ಅತ್ಯಂತ ನಿಧಾನ ಹಾಗೂ ದೃಢತೆಯಿಲ್ಲದವುಗಳಾಗಿರುತ್ತವೆ. ಹಾಗೆಯೇ ರೇಖಾಚಿತ್ರಗಳು ಕಲಾ ಶಿಕ್ಷಣಕ್ಕೆ ಬುನಾದಿ (Base) ರೇಖಾ ಚಿತ್ರಕ್ಕೆ Drawing is the Basis of every picture ಎಂದು ಆಂಗ್ಲಭಾಷೆಯಲ್ಲಿ ಸಂಬೋಧಿಸುತ್ತಾರೆ.

ಸ್ಕೆಚಸ್ (Sketche) ಎಂಬುದಕ್ಕೆ ಸೀಮಾ ರೇಖೆ ಚಿತ್ರ, ಬಾಹ್ಯರೇಖಾ ಚಿತ್ರ, ಕರಡುಚಿತ್ರ ಎಂದೆಲ್ಲ ಕನ್ನಡೀಕರಿಸುವುದುಂಟು ಕಾರಣ ತಾ ಕಂಡ ನೋಟದಲ್ಲಿ ಅದರ ಆಳವನ್ನಾಗಲೀ (Depth) ನೆಳಲು ಬೆಳಕುಗಳ ಚೆಲ್ಲಾಟವನ್ನಾಗಲೀ (Light and Shade) ಸೌಂದರ್ಯದ ಸಾಕಾರ-ವನ್ನಾಗಲೀ ಬರೆಯದೇ ಹೊರಗೆರೆಗಳನ್ನೆಳೆದು ಆಕಾರ ನೀಡುವುದೇ ಆಗಿರುತ್ತದೆ. ಪೂರ್ಣ ರೂಪ ಬರೆಯಬೇಕೆಂದೆನಿಸಿದರೇ ಸಮಯವು ಹೆಚ್ಚಾಗಲೂ ಬಹುದು. ನಿರೀಕ್ಷಿತ ಫಲಿತಾಂಶ ಬಾರದೆಯೂ ಇರಬಹುದು, ನೋಡುವ ನೋಟ ಸ್ಥಾನಪಲ್ಲಟವಾಗಲೂ ಬಹುದು.

ಯಾವುದಾದರೊಂದು ನೋಟವನ್ನು ಕಣ್ಣಾಲೆಗಳಲ್ಲಿ ತುಂಬಿಕೊಳ್ಳುವಷ್ಟು ಸಮಯವಿಲ್ಲವೇ ಛಾಯಾ ಚಿತ್ರ ಪೆಟ್ಟಿಗೆ (Camera) ತನ್ನ ಮಸೂರದಿಂದ ಕಂಡದನ್ನು ತನ್ನಲ್ಲಿ ಇಂಬಿಟ್ಟುಕೊಳ್ಳುವ ಕ್ಷಣದಂತೆ ಇಲ್ಲವೇ ದೊಂಬಿ ಮುಂತಾದ ಪರಿಸ್ಥಿತಿ ಕೈಮೀರುವ ಮುನ್ನ ಕ್ಷಿಪ್ರ ಕಾರ್ಯಾಚರಣೆ ಮಾಡುವಷ್ಟು ಸಮಯದಂತೆ ಚಿತ್ರಿಸುವುದಕ್ಕೆ Rapid Sketch ಅಥವಾ ಕ್ಷಿಪ್ರ ರೇಖಾ ಚಿತ್ರಗಳೆನ್ನಬಹುದು. ಇಂತಹ ಕ್ಷಿಪ್ರ ರೇಖಾ ಚಿತ್ರಗಳನ್ನು ಸಾವಿರಾರು ಬರೆದಿರುವ ಗುರು ಅವರ ಸಂಗ್ರಹ ಪುಸ್ತಕ (Album) ಒಂದು ನಾಡಿನ ಜನಜೀವನವನ್ನು ತೆರೆದಿಟ್ಟಂತೆ ಭಾಸವಾಗುತ್ತದೆ.

ಸುಮಾರು ಎಪ್ಪತ್ತಕ್ಕೂ ಮೇಲ್ಪಟ್ಟಿರುವ ಪುಸ್ತಕಗಳಲ್ಲಿ ಒಂದೊಂದು

ಪುಟದಲ್ಲಿ ನಾಲ್ಕೈದು ಚಿತ್ರಗಳಿದ್ದರೆ ಕೆಲವದರಲ್ಲಿ ಒಂದೇ ಇದೆ. ಬೆಳಿಗ್ಗೆ ಕಣ್ಣು ಹೊಸಕಿಕೊಂಡು ಎದ್ದು ಹೊರಬಂದು ಸೂರ್ಯನಿಗೆ ನಮಸ್ಕರಿಸುವ, ಅಥವಾ ಮನೆ ಮುಂದೆ ಕಸ ಗುಡಿಸಿ ಮುಂಜಾನೆ ರಂಗೋಲಿ ಹಾಕುವ ಕ್ರಿಯೆಯಿಂದ ಆರಂಭವಾಗಿ ರಾತ್ರಿ ಮಲಗುವವರೆಗಿನ ಎಲ್ಲಾ ಕ್ರಿಯೆಗಳು ಎಲ್ಲಾ ಬಗೆಯ ಜನ ಅವರ ಉಡಿಗೆ, ತೊಡಿಗೆ, ಧರಿಸುವ ಕಾಶಾಯ ವಸ್ತ್ರ, ದೈನಂದಿನ ಕಾಯಕ, ವಿಹರಿಸುವ, ವಿಹಂಗಮಿಸುವ, ವಿತಂಡವಾದಕ್ಕಿಳಿವ, ಅಪ್ಪುಗೆಯಲ್ಲಿ ಒಪ್ಪಿಗೆಯನ್ನು ಸೂಚಿಸುವ ಪ್ರಣಯಿನಿಗಳ ಹೀಗೆ ಒಂದೇ ಎರಡೆ ಅವುಗಳ ವಿವರವನ್ನು ಶಬ್ದಗಳಲ್ಲಿ ಹಿಡಿದಿಡಲು ಸಾಧ್ಯವೇ ಇಲ್ಲ ಎನ್ನುವಂತಿದೆ.

ಮುಖಚಿತ್ರಗಳನ್ನೇ ಗಮನಿಸುತ್ತಾ ಹೋದಂತೆ ಇನ್ನೊಂದು ಬಗೆಯ ಆಹ್ಲಾದವನ್ನುಂಟು ಮಾಡುತ್ತದೆ. ಎದೆ ಹಾಲನ್ನುಣ್ಣುವ ಕಂದಮ್ಮನಿಂದ ಹಿಡಿದು ತಲೆನಡುಗಿ, ಶಿರಬಾಗಿ, ಇದ್ದ ಹಲ್ಲುಗಳೆಲ್ಲವೂ ಉದುರಿ ಮುಖ ಸುಕ್ಕುಕಟ್ಟಿ ಕಳಹೀನವಾದ ಆ ಮುದಿ ನೋಟದವರೆಗೆ ವಿವಿಧ ಭಂಗಿಗಳಲ್ಲಿ ಮುಂಬದಿ ಹಿಂಬದಿ ಯಾವುದೇ ಇರಲಿ ಇಂತಹದೇ ಭಾಷೆಯ ಅಥವಾ ಜಾತಿಯ ಜನ ಎಂದು ಗುರುತಿಸುವ ಹಾಗೆ ಮುಖ ಚಿತ್ರಗಳು ಕಾಗದದ ಮೇಲೆ ಮೈದಾಳಿವೆ.

ಸೀಸದ ಕಡ್ಡಿಯಿಂದ ರಚಿಸಿರುವ ಹೆಚ್ಚಿನ ಪ್ರಮಾಣದ ಭೂ ದೃಶ್ಯಗಳು ಗ್ರಾಮ್ಯ ನೆಲೆಯಲ್ಲಿದ್ದು ಹಳ್ಳ, ಕೊಳ್ಳ, ಎಮ್ಮೆ, ಕರು ಅಲ್ಲಿ ಬೆಳೆದಿರುವ ಒಂದೊಂದು ಸಣ್ಣ ಗಿಡವನ್ನೇ ಆ ನೆಳಲು ಬೆಳಕುಗಳ ಹಿನ್ನೆಲೆಯಲ್ಲಿ ರೇಖಿಸುವ ವೇಗ ಅಸದೃಶ್ಯ. ಮುಂಜಾನೆಯ ಮಬ್ಬಿನಲ್ಲಿ ರೈತ ತನ್ನ ಎತ್ತುಗಳನ್ನು ಹೊಡೆದುಕೊಂಡು ಹೆಗಲಲ್ಲಿ ನೊಗವನ್ನೊತ್ತು ಬಾಯಲ್ಲಿ ಬೀಡಿ ಸೇದುತ್ತ ಹೊರಡುವ ದೃಶ್ಯದಿಂದಿಡಿದು ಉತ್ತು ಬಿತ್ತು ನಡುನೆತ್ತಿಗೆ ಸೂರ್ಯ ಬಂದಾಗ ದಣಿವಾರಿಸಿಕೊಳ್ಳಲು ಮರದ ನೆರಳಿಗೆ ಸಾಗಿ ಹೆಂಡಿರು ತಂದ ಹಿಟ್ಟುಸಾರನ್ನುಂಡು ಮಲಗಿ ಮತ್ತೆ ಕೆಲಸ ಆರಂಭಿಸಿ ಸಂಜೆ ಸೂರ್ಯಾಸ್ತವಾದಂತೆ ಹಿಂತಿರುಗಿ ದನಕರು ಹಟ್ಟಿಗೆ ಕಟ್ಟಿ ಮನೆ ಮುಂದೆ ಇರುವ ಜಗಲೀಮೇಲೆ ವಿಶ್ರಮಿಸಿ ಉಂಡು ಮಲಗುವವರೆಗೆ ಧಾರವಾಹಿ ಚಿತ್ರವನ್ನು ನೋಡಿದ ಹಾಗೆ ಚಿತ್ರಿಸಿರುವ ಆ ಪುಸ್ತಕಗಳು ವಿಶ್ವಕೋಶವನ್ನು ತೆರೆದು ನೋಡಿದ ಅನುಭವವಾಗುತ್ತದೆ.

ಮರಗಿಡ ಬಳ್ಳಿಗಳನ್ನು ಕುರಿತಂತೆ ಬರೆದಿರುವ ಆ ಕಿರು ಚಿತ್ರಸರಣಿಯಲ್ಲಿ ಮುಂಜಾನೆಯ ಮಬ್ಬಿನಲ್ಲಿ ಆಗ ತಾನೆ ಮೂಡಣದಿಂದ ರವಿ ಉದಯಿಸುವಾಗ ಬಿದ್ದ ಅಸ್ಪಷ್ಟ ಬೆಳಕು ಗಿಡದ ಮೇಲೆ ಬಿದ್ದಾಗಿನ

ದೃಶ್ಯದಿಂದಿಡಿದು ಸೂರ್ಯನೆತ್ತಿಗೆ ಬಂದು ತನ್ನ ಪ್ರಖರತೆಯನ್ನು ಸಾಬೀತುಪಡಿಸಿ ನಂತರ ಪಡುವಣ ದಿಕ್ಕಿಗೆ ಸಾಗುವ ಅವಾಸ್ತಾಂತರದಲ್ಲಿ ಬೀಳುವ ಬೆಳಕಿನ ಚೆಲ್ಲಾಟವನ್ನು ಸಮಯವರಿತು ಚಿತ್ತಿಸಿರುವ ನೋಟ ರಮ್ಯ. ಅದರಲ್ಲು ಮರದ ರೆಂಬೆ ಕೊಂಬೆ ಗಾಳಿಯ ಹೊಡೆತಕ್ಕೆ ಸಿಕ್ಕಿ ತೋಯ್ದಾಡುವ ದೃಶ್ಯ, ಮಳೆಯ ಅಬ್ಬರಕ್ಕೆ ಸಿಕ್ಕಿ ತಲೆ ತಗ್ಗಿಸಿ ನಿಂತಂತಿರುವ ವೃಕ್ಷ ಗುಚ್ಛ. ಮಳೆ ನಿಂತ ಮೇಲು ಮರದಿಂದಿರುವ ಮಳೆ ಹನಿ ಹನಿ, ಛತ್ರಿಯಂತೆ ಚಾಚಿರುವ ಮರಗಳಿಂದ ಹಿಡಿದು ತನ್ನ ಹಸಿರೆಲ್ಲವನ್ನು ಕಳೆದುಕೊಂಡು ನಗ್ನರೂಪಿಣಿಯಾಗಿ ನಿಂತಿರುವ ಕನ್ಯೆಯಂತೆ ಹಲವು ವಿದದಲ್ಲಿ ಶೋಭಿಸುವ ವನರಾಶಿಯನ್ನು ಚಿತ್ರಿಸಿರುವುದು ದೊಡ್ಡ ಗಾತ್ರದ ಕ್ಯಾನ್‌ವಾಸ್ ಚಿತ್ರಗಳೆಂದು ಭಾವಿಸುವ ಹಾಗಿಲ್ಲ. ಎಕ್ಸೈಜ್ ಹಾಳೆಯಲ್ಲಿ ಒಂದೆರಡು ಅಂಗುಲ ವ್ಯಾಪ್ತಿಯೊಳಗೆ ಸುಮಾರು ಹತ್ತರಿಂದ ಹದಿನಾರು ಚಿತ್ರವನ್ನು ಒಂದೇ ಮಗ್ಗುಲಲ್ಲಿ ಬರೆದಿರುವ ದೃಶ್ಯ ಕಾವ್ಯವಾಗಿದೆ. ಇಂತವುಗಳಲ್ಲಿ ಅಡಕವಾಗಿರುವ ಮತ್ತೊಂದು ಅಂಶವೆಂದರೇ ಸಂಯೋಜನೆ (space layout) ಪುಸ್ತಕ ವಿನ್ಯಾಸದಲ್ಲಿ ಇದು ಮಹತ್ತರ ಪಾತ್ರ ವಹಿಸುತ್ತವೆ.

ಪ್ರಾರಂಭದ ದೆಸೆಯಲ್ಲಿ ಪೆನ್ಸಿಲ್‌ನಿಂದ ಚಿತ್ರಿಸುತ್ತಿದ್ದುದನ್ನು ಹೊರತು ಪಡಿಸಿದರೆ ಉಳಿದಂತೆ ಹೆಚ್ಚಿನ ಪ್ರಮಾಣದಲ್ಲಿ ಇಂಕ್‌ನಿಂದಲೇ ಚಿತ್ರಿಸಿರುವ ಕ್ಷಿಪ್ರ ರೇಖಾ ಚಿತ್ರಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ ಸಂಗೀತ, ನೃತ್ಯ, ಯಕ್ಷಗಾನದಂತಹ ಇತರ ಪ್ರಕಾರಗಳ ದೃಶ್ಯವೈಭವವಾಗಲೀ, ಆಟೋಟಗಳಲ್ಲಿ ತಲ್ಲೀನರಾದವರ ಮೈಮಾಟವಾಗಲೀ ಎಲ್ಲಿಯೂ ಕಂಡುಬರದೆ ನಿತ್ಯಜೀವನದ ಬದುಕು ಬಿನ್ನಾಣಗಳು, ಗ್ರಮ್ಯ ನೆಲೆಯ ರೈತನ ಬವಣೆ. ಪ್ರಕೃತಿ ಪರಿಸರ ಇವೇ ಮುಖ್ಯವಾಗಿ ರಾಮಾಯಣ ಪುಸ್ತಕಕ್ಕೆ ಚಿತ್ರ ಬರೆಯುವ ಸಂದರ್ಭದಲ್ಲಿ (೧೯೫೦) ಕುವೆಂಪುರವರು ಕಾಡು ಮೇಡುಗಳ ವರ್ಣನೆಯೊಂದಿಗೆ ಅವರು ನೀಡುತ್ತಿದ್ದ ಪ್ರಕೃತಿ ಪರಿಸರದ ವಾಕ್ ಚಿತ್ರಣ ತದನಂತರದಲ್ಲಿ ಗುರು ಅವರ ಕೈಯಲ್ಲಿ ದೃಶ್ಯ ಚಿತ್ರಣವಾಗಲಿಕ್ಕೆ ಪ್ರೋತ್ಸಾಹಕವಾಗಿರಬಹುದೆಂದು ಭಾವಿಸಬಹುದಾಗಿದೆ.

ಪುಸ್ತಕಗಳಿಗೆ ಚಿತ್ರಗಳು

ಕ್ಷಿಪ್ರ ರೇಖಾಚಿತ್ರಗಳು ಪಠ್ಯ ಪುಸ್ತಕಗಳಿಗಾಗಲೀ, ಅಥವಾ ಇನ್ನಿತರ ಪುಸ್ತಕಗಳಿಗಾಗಲೀ ಸಂದರ್ಭ ಚಿತ್ರ ಬರೆಯಲು ತುಂಬಾ ಸಹಾಯಕವಾಗಿದೆ ಎನ್ನುವ ಗುರು ಅವರು ಮುದ್ರಣಕ್ಕೆ ಸಿದ್ದ ಪಡಿಸುವಾಗ ಹೆಚ್ಚಾಗಿ ಹಿನ್ನೆಲೆಯಲ್ಲಿನ ಕಾಗದದ ಬಿಳಿಯನ್ನೇ (Paper White) ಬಿಟ್ಟುಕೊಂಡು ಉಳಿದಂತೆ ಅಗತ್ಯತೆಗೆ ತಕ್ಕಂತೆ ರೇಖೆಗಳನ್ನು ಲಂಬ ತಿರುವು, ವಕ್ರ ಅಥವಾ ಕೋನಾಕಾರವಾಗಿ, ತೆಳು ಅತಿ ತೆಳು ಇಲ್ಲವೆ ಗಾಢತೆ ಬರುವ ಹಾಗೆ



ಮೇಲಿಂದ ಮೇಲೆ ಹಲವಾರು ಗೆರೆಗಳಿಂದ ರೇಖಿಸಿ ಛಾಯೆಯುನ್ನುಂಟು ಮಾಡಿ ದುಂಡುತನವನ್ನು (Roundness) ತರುವ ಮೂಲಕ ಮನುಷ್ಯ ಚಿತ್ರಕ್ಕಾಗಲೀ ಅಥವಾ ಅದಕ್ಕೆ ಹೊಂದಿಕೊಂಡಂತಹ ಪರಿಸರ ಅಥವಾ ಸಾಧನ ಸಲಕರಣೆಗಳ ಸಹಿತ ಛಾಯಾಚಿತ್ರವನ್ನು ನೋಡಿದ ಅನುಭವವಾಗುವಂತೆ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

ಮತ್ತೊಂದು ವಿಧಾನದಲ್ಲಿ ಕುಂಚದಿಂದಲೇ ಗೆರೆಗಳನ್ನು ಆಕಾರಕ್ಕೆ ತಕ್ಕಂತೆ ಎಳೆದು ತಲೆಕೂದಲು, ಸೀರೆಅಂಚು, ಕಚ್ಚೆಪಂಚೆಯಲ್ಲಿನ ನರಿಗೆ, ಹೊದ್ದ ಶಾಲು, ತೊಟ್ಟ ಪೈಜಾಮ ಯಾವುದೇ ಇರಲಿ ಅವುಗಳ ನರಿಗೆ ಮೇಲೆ (Folds) ಬಿದ್ದ ಬೆಳಕು ನಿಚ್ಚಳವಾಗಿ ಕಾಣುವಂತಾಗಲು ಗಾಢವಾದ ಕಪ್ಪನ್ನು (Dark Colours) ಲೇಪಿಸಿ ರೂಪ ಕೊಟ್ಟಿರುವುದನ್ನು ಕಾಣುತ್ತೇವೆ. ನಿಬ್ಬಿನಿಂದ ಬರೆದ ಚಿತ್ರಗಳಲ್ಲಿ ಗೆರೆಗಳು ತೆಳುವಾಗಿದ್ದರೆ ಕುಂಚದಿಂದ ಬರೆದದ್ದು ಡಾಳವಾಗಿ ಕಾಣುತ್ತದೆ.

ಇದಲ್ಲದೇ ಕಪ್ಪು ಕಾಗದದ ಹಿನ್ನೆಲೆಯಲ್ಲಿ ಅಗತ್ಯವಿರುವ ಚಿತ್ರವನ್ನು ಬಿಳಿಯ ಬಣ್ಣದಿಂದ ರೇಖಿಸಿರುವುದು ಮತ್ತು ಚಿತ್ರದ ಸ್ವರೂಪ ನಿಚ್ಚಳವಾಗಿ ಕಾಣಲು ಬಿಳಿಯ ಬಣ್ಣವನ್ನೇ ಅಲ್ಲಲ್ಲಿ ಹಚ್ಚಿ ಪುಸ್ತಕ ತೆರೆದೊಡನೆ ತಟ್ಟನೆ ಗಮನಸೆಳೆಯುವಂತೆ ಮಾಡುವ ವಿಧಾನವು ಸೇರಿದಂತೆ ಹಲವು ವಿಧದ ಚಿತ್ರರಚನೆ ಮಾಡಿರುವ ಗುರು ಅವರು ಮಾಡಿರುವ ಈ ಕ್ರಮವನ್ನು **ಗೆರೆಚಿತ್ರದಚ್ಚು** ಮಾದರಿ ಎನ್ನುತ್ತಾರೆ. (Line Block Method) ಸಾಮಾನ್ಯವಾಗಿ ಈ ಕ್ರಮದಿಂದಾದ ಅಚ್ಚಿನಿಂದ ಸಾಧಾರಣ ಕಾಗದದ ಮೇಲೂ (Ordinery News Print) ಮುದ್ರಿಸಲು ಸಾಧ್ಯ. ಸಾಮಾನ್ಯ ಲೆಟರ್‌ಪ್ರೆಸ್‌ನಲ್ಲಿ ಮುದ್ರಿಸಬಹುದಾದ ಈ ಕ್ರಮಕ್ಕೆ ೨-೩ ವರ್ಣಗಳಿಂದ ಚಿತ್ರಿಸಬೇಕಾದಲ್ಲಿ ಬೇರೆ ಬೇರೆ ಅಚ್ಚುಗಳನ್ನು ತಯಾರಿಸಿಕೊಳ್ಳುವುದು ಅನಿವಾರ್ಯ, ಕಲಾವಿದ ಮತ್ತು ಅಚ್ಚು ತಯಾರಕ ಈರ್ವರ ಕೆಲಸವು ಜವಾಬ್ದಾರಿಯುತವಾದದ್ದೆ, ಗುರು ಅವರು ಬರೆದ ಮುಖಪುಟಗಳಲ್ಲಿ ಬಹುತೇಕ ವರ್ಣಗಳುಳ್ಳವುಗಳಾದರೇ ಒಳಪುಟಗಳಲ್ಲಿ ಏಕವರ್ಣದ ರೇಖಾಚಿತ್ರಗಳೇ ಅಧಿಕ.

ರೇಖಾಚಿತ್ರ ರಚನೆಯಲ್ಲದೇ ಮತ್ತೊಂದು ಕ್ರಮವಾದ ವಾಷ್ ಡ್ರಾಯಿಂಗ್ ಅಥವಾ (Mano Crome Painting) ಎನ್ನುವ ಏಕವರ್ಣದ ಚಿತ್ರಗಳನ್ನು

ಸಹ ಬರೆದಿದ್ದು, ಕೆಲವಕ್ಕೆ ಪಾರದರ್ಶಕ ವರ್ಣ ಐವರಿಬ್ಲಾಕ್ ಅಥವಾ ಲ್ಯಾಂಪ್‌ಬ್ಲಾಕ್ ಬಳಸಿದ್ದರೇ ಇನ್ನು ಹಲವಕ್ಕೆ ಪೋಸ್ಟರ್ ಕಲರ್‌ಗೆ ಬಿಳಿಬಣ್ಣವನ್ನು ಮಿಶ್ರಮಾಡಿ ಹಾಪ್‌ಟೋನ್ ಬ್ಲಾಕ್‌ಗೆ ಅನುಕೂಲವಾಗುವಂತೆ ಚಿತ್ರಿಸಿದ್ದಾರೆ. ಲೈನ್ ಬ್ಲಾಕ್ ಚಿತ್ರಕ್ಕೆ ವಿವಿಧ ನೆಲೆಯ ಛಾಯೆ ತರಲು ಸ್ಕ್ರೀನ್ ಪೇಪರ್ ಅಂಟಿಸಿರುವುದು ಉಂಟು. ಇದು ದುಬಾರಿ ತಂತ್ರವಾದುದರಿಂದ



ಮುದ್ರಕನ ಅಥವಾ ಲೇಖಕನ ಬೇಡಿಕೆಗೆ ಅನು–ಗುಣವಾಗಿ ಚಿತ್ರಿಸಿಕೊಟ್ಟಿದ್ದಾರೆ. ಚಂದಮಾಮ ಮತ್ತಿತರ ಕಾಮಿಕ್ಸ್ ಪ್ರದಾನವಾದ ಆಂಗ್ಲ–ಪತ್ರಿಕೆಗಳಲ್ಲಿ ಒಂದೇ ಇಂಡಿಯನ್ ಇಂಕ್ ಮೂಲ ಚಿತ್ರಕ್ಕೆ ಮೂರು ವರ್ಣಗಳಿಗೂ ಮೂರು ಟ್ರೇಸಿಂಗ್ ಕಾಗದ ಅಂಟಿಸಿ ಒಂದೊಂದಕ್ಕೆ ಒಂದು ವರ್ಣ ಸೂಚಿಸಿ ಎಲ್ಲೆಲ್ಲಿ ಬರಬೇಕೆಂದು ಗುರುತುಹಾಕಿ ಕೊಟ್ಟರೇ ಸಾಕು. ಪಡಿಯಚ್ಚು ಮಾಡುವವ ಮತ್ತು ಮುದ್ರಣಕಾರನ ಬುದ್ಧಿಶಕ್ತಿ ಹಾಗೂ ಕ್ರಿಯಾ–ಶಕ್ತಿಯಿಂದ ಅಚ್ಚುಕಟ್ಟಾದ ತ್ರಿವರ್ಣದ ಚಿತ್ರವಾಗಿರುವುದನ್ನು ನೋಡಿದಾಗ ಕಲಾವಿದ, ಮತ್ತು ಮುದ್ರಕನ ನಡುವೆ ಇರುವ ತಂತ್ರಜ್ಞಾನ ಅಪಾರವಾದದ್ದು ಎನಿಸುತ್ತದೆ. ಇದೊಂದು ಅಪ್ಪಟ ವಾಣಿಜ್ಯ ಕಲೆಯಾಗಿದ್ದು ವಿವರಿಸುತ್ತಾ ಹೋದಂತೆ ಪುಟಗಳು ಮಿತಿಯನ್ನು ದಾಟುತ್ತವೆಂಬ ಭಯ, ರಾಮಾಯಣದ ಹಲವು ಸನ್ನಿವೇಷಗಳನ್ನು ಹಾಗೂ ಬೆಳೆ ಕುಯಿಲಿಗೆ ಸಂಬಂಧಿಸಿದ್ದು, ಕಟಾವು ಮಾಡುತ್ತಿರುವುದು ಸೇರಿದಂತೆ ಕೆಲವೊಂದು ಚಿತ್ರಗಳನ್ನು ಏಕವರ್ಣದಿಂದ ನೆಳಲು ಬೆಳಕುಗಳ ಸಂಯೋಜನೆಯಲ್ಲಿ ಛಾಯಾಚಿತ್ರವೊಂದನ್ನು ನೋಡಿದ ಅನುಭವವಾಗುವಂತೆ ಹಾಪ್‌ಟೋನ್ ಬ್ಲಾಕ್ ಮೆಥೆಡ್‌ನಲ್ಲಿ ಚಿತ್ರಿಸಿದ್ದಾರೆ.

ಶರಣ ಚರಿತಾಮೃತ

ಕುವೆಂಪುರವರ ಜನಪ್ರಿಯ ವಾಲ್ಮೀಕಿ ರಾಮಾಯಣದ ನಂತರ ಅತಿಹೆಚ್ಚು ಚಿತ್ರಗಳನ್ನೊಂದಿದ ಈ ಪುಸ್ತಕದಲ್ಲಿ ಇಂಡಿಯನ್ ಇಂಕ್ ಬಳಸಿ ನಿಬ್ಬಿನಿಂದಲೇ ಬರೆದವುಗಳಾಗಿದ್ದು ಕಲಾವಿದರ ಪರಿಶ್ರಮಕ್ಕೆ ಕನ್ನಡಿ ಹಿಡಿದಂತಿದೆ.


ಸಾಮಾಜಿಕವಾದ ಕಥೆಯನ್ನಾಧರಿಸಿ ಸಂದರ್ಭ ಚಿತ್ರ ಬರೆಯುವುದಕ್ಕೂ ಐತಿಹಾಸಿಕ, ಪೌರಾಣಿಕ ಅಥವಾ ಧಾರ್ಮಿಕ ವಿಷಯ ಕುರಿತು ಬರೆಯುವುದಕ್ಕೂ ಸಾಕಷ್ಟು ವ್ಯತ್ಯಯಗಳಿವೆ. ಆ ಕಾಲದ ಜನಜೀವನ, ಧಾರ್ಮಿಕತೆಯ ಮನೋಭಾವ, ವಸ್ತ್ರ ವಿನ್ಯಾಸ ಮುಖದಲ್ಲಿನ ಕಳೆ, ಎಲ್ಲವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದ್ದು ಭಾವುಕರಾಗಿರುವ ಭಕ್ತರ ಭಾವನೆ ಕೆರಳದೇ

ಅರಳುವಂತಾಗುವಂತೆ ಚಿತ್ರಿಸಬೇಕಾಗುತ್ತದೆ. ಶಬ್ದ ಸೃಷ್ಟಿಯಿಂದ ವ್ಯಕ್ತಿತ್ವ ಕಟ್ಟಿಕೊಡುವ ಸಾಹಿತಿಯಷ್ಟೇ ಪ್ರಜ್ಞಾಪೂರ್ವಕವಾಗಿ ಕಲಾವಿದ-ನಾದವನು ಚಿತ್ರಿಸಬೇಕಾಗುತ್ತದೆ. ಈ ಕೆಲಸವನ್ನು ಶರಣ ಚರಿತಾಮೃತದಲ್ಲಿ ಮಾಡಿದ್ದಾರೆ. ಅಲ್ಲಿ ಬರುವ ಶರಣರ ಪಾತ್ರಗಳನ್ನು ಯಾರು ನೋಡಿಲ್ಲ. ಮಡಿವಾಳ ಮಾಚಿದೇವ. ಕುಂಬಾರ ಗುಂಡಯ್ಯ, ಮಾದಾರ ಚೆನ್ನಯ್ಯ, ಹಡಪದ ಅಪ್ಪಣ್ಣ ಹೀಗೆ ವಿವಿಧ ಕಾಯಕದ ಮೂಲಕ ಗುರುತಿಸುವ ಮತ್ತು ವ್ಯಕ್ತಿತ್ವ ದರ್ಶಿಸುವ ಪರಿಚಯಾತ್ಮಕ ಕಿರುಲೇಖನಕ್ಕೆ ಚಿತ್ರರಚಿಸುವಾಗ ಗುರು ಅವರು ಸಾಕಷ್ಟು ಕ್ಷೇತ್ರ ಕಾರ್ಯ (Field Work) ಮಾಡಿದ್ದಾರೆ. ಶರಣ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಓದಿ ಮನನ ಮಾಡಿಕೊಂಡಿರುವುದರ ಜೊತೆಗೆ ಅವರು ಬೆಳೆದು ಬಂದ ಸಂಸ್ಕಾರವು ಅಂತಹದೇ ಆಗಿದ್ದುದರಿಂದ ಪ್ರತಿ ಚಿತ್ರಗಳು ವೀಕ್ಷಕನಿಗೆ ಪೂಜ್ಯಭಾವ ಬರುವಂತೆ ಆಗಿವೆ. ಇಲ್ಲಿನ ಚಿತ್ರಗಳು ಪೂರ್ಣ ಪ್ರಮಾಣದ ಮಾನವಾಕಾರ ಹೊಂದಿದ್ದು, ಛಾಯಾಪ್ರಕಾಶಗಳ ನಾಟಕೀಯ ವೈಶಿಷ್ಟ್ಯ (Play of Light) ತಂತ್ರ ನೈಪುಣ್ಯ (Technique) ಮುಖಭಾವ, ಉಡುಪು, ಪ್ರಮಾಣಬದ್ಧ ಚಿತ್ರರಚನೆ, ಮಾನವಾಕೃತಿಯಲ್ಲಿ ಯತಾದರ್ಶನ ನಿರೂಪಣೆ (Perspective in human Figure) ಬಹಳ ಅಚ್ಚುಕಟ್ಟಾಗಿ ಮೂಡಿದೆ. ಷಟಸ್ಥಲಾರೋಹಣ ಮಾಡಿರುವ ಅಲ್ಲಮಪ್ರಭು ನೇತೃತ್ವದಲ್ಲಿ ಶರಣರ ಅನುಭವ ಮಂಟಪ, ಮರಳು ಶಂಕರದೇವನ ಪ್ರಸಂಗ, ಕದಳಿವನದಲ್ಲಿ ಅಕ್ಕಮಹಾದೇವಿ ಉತ್ತಮ ಸಂಯೋಜನೆ ಆಗಿದ್ದು ಕತೆಯ ಅಂತರಗತಭಾವಕ್ಕೆ ಪೂರಕವಾಗಿವೆ. ಸುಮಾರು ೭೨ ರೇಖಾಚಿತ್ರಗಳನ್ನು ರಚಿಸಿದ್ದು ಒಂದೊಂದು ಧಾರ್ಮಿಕ ನೆಲೆಗಟ್ಟಿನಲ್ಲಿವೆ. ಡಾ॥ ಸಿದ್ದಯ್ಯ ಪುರಾಣಿಕರು ಬರೆದ ಸುಮಾರು ೬೦೦ ಪುಟದ ಈ ಗ್ರಂಥ ವಯಸ್ಕರ ಶಿಕ್ಷಣ ಸಮಿತಿಯಿಂದ ೧೯೬೪ರಲ್ಲಿ ಪ್ರಕಟಗೊಂಡಿದೆ.

ಬಿತ್ತಿ ಪತ್ರಗಳು

ನಾಡಿನ ಜನತೆಗೆ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಬಿತ್ತಿ ಪತ್ರಗಳನ್ನು ಪ್ರಕಟಿಸುವುದು ಓರಿಯೆಂಟೇಶನ್ ಸ್ಟಡಿ ಸೆಂಟರ್‌ನ ಹಲವು ಯೋಜನೆಗಳಲ್ಲಿ ಒಂದಾಗಿದ್ದು ಅವುಗಳಲ್ಲಿ **ಶತೃ ನಮ್ಮೊಳಗೆ ಇದ್ದಾನೆ.** THE ENEMY WITH IN ಎಂಬ ದ್ವಿಭಾಷಾ ಶೀರ್ಷಿಕೆಯಲ್ಲಿ ಕಲಬೆರಕೆ ಧಾನ್ಯ ಮಾರುವವನ, ಕಳ್ಳಬಟ್ಟಿ ತಯಾರಿಸುವವನ, ಸುಳ್ಳುಸುದ್ದಿ ಹರಡುವವನ, ಸೋಮಾರಿಯಾಗಿ ತಿಂದು ಮಲಗಿರುವವನ, ವರದಕ್ಷಿಣೆಗಾಗಿ ಪೀಡಿಸುವವನ, ಹೀಗೆ ವಿಧ ವಿಧವಾದ ವಂಚಕರ ಚಿತ್ರಗಳನ್ನು ಆಯಾಯ ಶೀರ್ಷಿಕೆಗೆ ಅನುಗುಣವಾಗಿ ಚಿತ್ರಿಸಿರುವುದು ಒಂದು ಬಗೆಯಾದರೇ. ....ಮತ್ತೊಂದು ರೀತಿಯಲ್ಲಿ ನೀತಿಬೋಧಕವಾದ ಧಾರ್ಮಿಕ ಸ್ವಾತಂತ್ರ್ಯ ನಮ್ಮ ಹಕ್ಕು

ದೇಶವನ್ನುಳಿಸಲು ಸೈನ್ಯಕ್ಕೆ ಸೇರಿ, ಉತ್ಪಾದನೆ ಹೆಚ್ಚಿಸಿ ಒಳ್ಳೆ ಬೆಳೆ ಬೆಳೆಯಿರಿ, ಕೆರೆ ಕಟ್ಟೆ ಕಟ್ಟಿ ಪರಿಸರ ಉಳಿಸಿ, ರೈತನೇ ದೇಶದ ಬೆನ್ನಲಬು ಇತ್ಯಾದಿ ವಿಷಯ ಕುರಿತು ಬಿತ್ತಿಪತ್ರಗಳು ಹಲವು. ಬೇರೆ ಬೇರೆ ಭಾಷೆಯಲ್ಲಿ ಸಹ ಪ್ರಕಟಗೊಂಡು ರಾಷ್ಟ್ರವ್ಯಾಪ್ತಿ ಪ್ರಸಾರಗೊಂಡಿವೆ.



ವರ್ಣ ಚಿತ್ರಗಳು

